ಪಸರಿಪ ಕನ್ನಡಕ್ಕೊಡೆಯನೀಗ ದರಾಂಕಿತ ಬೇಂದ್ರೆ

● ಪ್ರೊ. ಬಿ. ಎಚ್. ಶ್ರೀಧರ



ಡಾ. ದ. ರಾ. ಬೇಂದ್ರೆ ಸಾಹಿತ್ಯ-ಸಿದ್ಧಾಂತ ಲೇಖನ ಮಾಲೆ - ೧

ಸಂಪಾದಕರು : ಡಾ. ವಾಮನ ಬೇಂದ್ರೆ

ಪಸರಿಪ ಕನ್ನಡಕ್ಕೊಡೆಯನೀಗ
ದರಾಂಕಿತ ಬೇಂದ್ರೆ

ಪ್ರೊ. ಬಿ. ಎಚ್. ಶ್ರೀಧರ
ನಿವೃತ್ತ ಪ್ರಾಚಾರ್ಯರು
ಭಾರತೀಯ ಕನ್ನಡ ಸಾಹಿತ್ಯರತ್ನ, ಶಿರಸಿ (ಉ. ಕ.)

ಅಂಬಿಕಾತನಯದತ್ತ ವೇದಿಕೆ, ಶ್ರೀಮಾತಾ ಪ್ರಕಾಶನ
ಧಾ ರ ವಾ ಡ

PASARIPA KANNADAKKODEYA DARANKITA BENDRE
(Critical Essay) by Prof. B. H. Sreedhar, Bharteeya Kannada Sahitya Ratna, Sirsi (U. K.) - 581 402. Published by Pandurang Bendre, Shrimata Prakashana, Ambikatanayadatta Vedike, 13, Shrimata, Sadhankeri, Dharwad 580 008. First Edition : 31-1-87 1000 Copies.

ಪ್ರಥಮ ಮುದ್ರಣ : ೩೧-೧-೧೯೮೭

ಡಾ. ದ. ರಾ. ಬೇಂದ್ರೆಯವರ ೯೨ ನೆಯ ಜನ್ಮದಿನದ ಸ್ಮರಣೆ

ಸಲಹೆ-ಸಹಕಾರ :

ಪ್ರಾ. ಕೆ. ಎಸ್. ಶರ್ಮಾ, ಕಲಾವಿದ ಸುರೇಶ ಕುಲಕರ್ಣಿ, ಶ್ರೀ ಪಿ. ಆರ್. ಭಾಗವತ, ಡಾ. ಕೆ. ರಾಘವೇಂದ್ರರಾವ್, ಶ್ರೀ ಎನ್. ಕೆ. ಕುಲಕರ್ಣಿ, ಡಾ. ಸದಾನಂದ ನಾಯಕ, ಡಾ. ಪ್ರಭಾಕರ ಕುಲಕರ್ಣಿ, ಡಾ. ಮಾಧವ ನಾತು, ಶ್ರೀ ಶ್ರೀಪಾದ ಬೇಂದ್ರೆ, ಶ್ರೀ ಆರ್.ಎನ್.ನಂಜುಂಡಪ್ಪ. ಶ್ರೀಮತಿ ಸುಮಿತ್ರಾ ಪೋತ್ನೀಸ, ಶ್ರೀಮತಿ ಸುಲೋಚನಾ ಪೋತ್ನೀಸ ಮತ್ತು ಬೇಂದ್ರೆ ಮನೆತನದ ಆಪ್ತೇಷ್ಟರು.

ಬೆಲೆ : ರೂ. ೬-೦೦

ಮುದ್ರಕರು :

ಸೋಮಶೇಖರ ಆಕಳವಾಡಿ
ಮನೋಹರ ಮುದ್ರಣಾಲಯ
ಮಾರ್ಕೆಟ, ಧಾರವಾಡ

ಅರ್ಪಣೆ



ದಿ. ಶ್ರೀಮತಿ ಶಾಂತಾಬಾಯಿ ಪಂಚನನೀಕರ

ಇವರಿಗೆ

ಗೌರವಪೂರ್ವಕವಾಗಿ

ಪ್ರಕಾಶಕರ ಮಾತು

ಬೇಂದ್ರೆ ಸಾಹಿತ್ಯ ಸಿದ್ಧಾಂತ ಲೇಖಗಳ ಪ್ರಕಟಣೆಯನ್ನು ಪ್ರಾರಂಭಿಸುವ ಯೋಚನೆ ಬಹಳ ದಿವಸಗಳಿಂದ ಇತ್ತು. ೨೭-೬-೧೯೮೩ ರಂದು ಡಾ. ವಾಮನ ಬೇಂದ್ರೆಯವರಿಗೆ ಪ್ರೊ. ಬಿ, ಎಚ್. ಶ್ರೀಧರ ಅವರಿಂದ ಒಂದು ಔಚಿತ್ಯಪೂರ್ಣ ಪತ್ರ ಬಂತು— "ನನಗೆ ನನ್ನ ತಂದೆಗೆ ಸಮಾನರಾದವರು ನಿಮ್ಮ ತಂದೆ. ಅವರ ಕಷ್ಟ-ಸುಖಗಳಲ್ಲಿ ಮನಸಾ ನಾನು ಭಾಗಿಯಾಗಿದ್ದೆ. ಅವರು ನನ್ನ ಕಷ್ಟ-ಸುಖಗಳಲ್ಲಿ ತ್ರಿಕರಣಪೂರ್ವಕವಾಗಿ ಭಾಗಿಗಳಾಗಿದ್ದರು. "ಪಸರಿಪಕನ್ನಡಕ್ಕೊಡೆಯನೀಗ ದ. ರಾ + ಅಂಕಿತ ಬೇಂದ್ರೆ" ಎಂದು ನಂಬಿದ

ನಾನು ನನ್ನ ಅನುಭವಗಳನ್ನು ಬರೆಯುತ್ತಿದ್ದೇನೆ ". ಈ ಕಾರಣದ ಮೂಲಕ ಅಂಬಿಕಾತನಯದತ್ತ ವೇದಿಕೆಯ ಪುಸ್ತಕಪ್ರಕಟಣೆಯ ವಿಚಾರಕ್ಕೆ ಚಾಲನೆ ಸಿಕ್ಕಿತು.

ಈ ವೇದಿಕೆಯ ಕಾರ್ಯ ಬೆಳೆಯುತ್ತ ಹೋಗಬೇಕು ಎಂಬ ದೃಷ್ಟಿ-ಕೋನದಿಂದ ವಾಮನ ಬೇಂದ್ರೆಯವರ ಮಾವ-ನಿವೃತ್ತ ಶಿಕ್ಷಣಾಧಿಕಾರಿಗಳಾ-ಗಿದ್ದ ಶ್ರೀ ವಿನಾಯಕ ಪಂಚನದೀಕರ ಅವರು ಅವರ ಧರ್ಮಪತ್ನಿ ದಿ. ಶಾಂತಾಬಾಯಿ ಪಂಚನದೀಕರ ಅವರ ಸ್ಮರಣೆಯ ನಿಮಿತ್ತವಾಗಿ ಬೇಂದ್ರೆ ಸಾಹಿತ್ಯ ಸಿದ್ಧಾಂತ ಮಾಲೆಯ ಈ ಪ್ರಥಮ ಪುಷ್ಪವನ್ನು ಪ್ರಕಟಿಸುವದಕ್ಕಾಗಿ ಧನಸಹಾಯ ಸಲ್ಲಿಸಲು ಸಿದ್ಧರಾದರು. ಇವರ ಈ ಉಪಕಾರವನ್ನು ವೇದಿಕೆ ಗೌರವಪೂರ್ವಕವಾಗಿ ಸ್ವೀಕರಿಸುತ್ತಿದೆ. ವಿದ್ವತ್‌ಪೂರ್ಣವಾದ ಲೇಖವನ್ನು ಬರೆದುಕೊಟ್ಟ ಪ್ರಾ. ಶ್ರೀಧರ ಅವರಿಗಂತೂ ವೇದಿಕೆ ಅತ್ಯಂತ ಆಭಾರಿ-ಯಾಗಿದೆ. **ಶ್ರೀಧರ-ಬೇಂದ್ರೆ** ಋಣಾನುಬಂಧವು ಸಾಹಿತ್ಯ ಸೇವೆಯಲ್ಲಿ ಸತತವಾಗಿ ಹರಿಯಲಿ ಎಂಬುದೇ ನಮ್ಮ ಹಂಬಲ.

ಬೇಂದ್ರೆ ಸಾಹಿತ್ಯಸಿದ್ಧಾಂತದ ವಿವಿಧ ಮುಖಗಳ ಪ್ರತಿಪಾದನೆಯನ್ನು ಮಾಡುವ ಲೇಖನಗಳ ಪ್ರಕಟಣೆಯ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಯಥಾವಕಾಶ ಅವುಗಳನ್ನು ಪ್ರಕಟಪಡಿಸುವ ಸಂಕಲ್ಪ ನಮ್ಮದಾಗಿದೆ. ಸಂಕಲ್ಪಸಿದ್ಧಿ ವಾಚಕವೃಂದದ ಬೆಂಬಲವನ್ನು ಅವಲಂಬಿಸಿದೆ. ಬೆಂಬಲದಲ್ಲಿ ವಿಶ್ವಾಸವಿದೆ.

ಮನೋಹರ ಮುದ್ರಣಾಲಯದ ಶ್ರೀ ರವೀಂದ್ರ ಆಕಳವಾಡಿಯವರು ಆಸ್ಥೆವಹಿಸಿ, ಸುಂದರವಾಗಿ ಈ ಪುಸ್ತಿಕೆಯನ್ನು ಮುದ್ರಿಸಿಕೊಟ್ಟಿದ್ದಕ್ಕಾಗಿ ಅಭಿವಂದನೆಗಳು.

ಪಾಂಡುರಂಗ ಬೇಂದ್ರೆ
೧೭-೧೨-೧೯೮೬

ಶ್ರೀಮಾತಾ ಪ್ರಕಾಶನ,
ಅಂಬಿಕಾತನಯದತ್ತ ವೇದಿಕೆ, ಧಾರವಾಡ

ಬೇಂದ್ರೆಯವರನ್ನು ಕುರಿತು
ಕೆಲವು ಹೊಸ ಪ್ರಕಟಣೆಗಳು

೧. ಬೇಂದ್ರೆಕಾವ್ಯ– ಡಾ. ರಂ. ಶ್ರೀ ಮುಗಳಿ, ಕನ್ನಡ ಸಂಘ, ಕ್ರೈಸ್ಟ ಕಾಲೇಜ್. ಬೆಂಗಳೂರು ೧೯೭೬

೨. ಬೇಂದ್ರೆ ಕಾವ್ಯದಲ್ಲಿ ಅನುಭಾವದ ನಿಚ್ಚಣಿಕೆ– ಡಾ. ವಿಜಯ ದಬ್ಬೆ ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ೧೯೭೬

೩. ಬೇಂದ್ರೆಯವರ ಕಾವ್ಯದಲ್ಲಿ ಪ್ರೇಮದ ಆವಿಷ್ಕಾರ : ಸ್ವರೂಪಗಳು –ಬಸವರಾಜ ಕಲ್ಗುಡಿ, ಕನ್ನಡ ಸಂಘ ಕ್ರೈಸ್ಟ ಕಾಲೇಜ್, ಬೆಂಗಳೂರು ೧೯೭೬

೪. ಬೇಂದ್ರೆಯವರ ಕಾವ್ಯದಲ್ಲಿ ಶ್ರುತಿ ಮತ್ತು ಕೃತಿ : ಕೀರ್ತಿನಾಥ ಕುರ್ತಕೋಟಿ. ಪ್ರಸಾರಾಂಗ ಕ. ವಿ. ವಿ. ಧಾರವಾಡ ೧೯೭೫

೫. ಬೇಂದ್ರೆಯವರ ಕಾವ್ಯಗುಣ ಹಾಗೂ ಪ್ರಯೋಗಶೀಲತೆ ಡಾ. ವಿ. ಕೃ. ಗೋಕಾಕ ಪ್ರಸಾರಾಂಗ ಕ.ವಿ.ವಿ. ಧಾರವಾಡ ೧೯೭೪

೬. ಸಾಹಿತ್ಯ ತತ್ವ : ಬೇಂದ್ರೆ ದೃಷ್ಟಿ ಡಾ. ಕೆ. ವಿ. ನಾರಾಯಣ. ಕನ್ನಡ ಸಂಘ, ಕ್ರೈಸ್ಟ್ ಕಾಲೇಜ, ಬೆಂಗಳೂರು ೧೯೭೪

೭. ಬೇಂದ್ರೆ ಕಾವ್ಯಲೋಲಕ– ಡಾ. ವಾಮನ ಬೇಂದ್ರೆ, ಸಮಾಜ ಪುಸ್ತಕಾಲಯ ಧಾರವಾಡ ೧೯೭೨

× × × ×

ಸಾಹಿತ್ಯ ಸಿದ್ಧಾಂತ ಮಾಲಿಕೆಯಲ್ಲಿ
ಬರಲಿರುವ ಪುಸ್ತಿಕೆಗಳು

೧. ಬೇಂದ್ರೆ ಕಾವ್ಯದಲ್ಲಿ ವಿಶ್ವಮಾನವತೆ –ಡಾ. ಸದಾನಂದ ನಾಯಕ
೨. ಬೇಂದ್ರೆಯವರ ಹಾಸ್ಯಪ್ರಜ್ಞೆ –ಶ್ರೀ ಎನ್. ಕೆ. ಕುಲಕರ್ಣಿ
೩. ಬೇಂದ್ರೆಯವರ ಸಾಮಾಜಿಕ ಪ್ರಜ್ಞೆ –ಪ್ರಾ. ಕೆ. ಎಸ್. ಶರ್ಮಾ
೪. ಎರಡು ಕಣ್ಣು –ಬೇಂದ್ರೆ ಮತ್ತು ಪಿಕ್ಯಾಸೋ – ಸುರೇಶ ಕುಲಕರ್ಣಿ
೫. ಬೇಂದ್ರೆಯವರ ಮುದ್ರಿಕೆಯ ಕವನಗಳು –ಡಾ. ವಾಮನ ಬೇಂದ್ರೆ

ಪಸರಿಪ ಕನ್ನಡಕ್ಕೊಡೆಯನೀಗ
ದರಾಂಕಿತ ಬೇಂದ್ರೆ

ಡಾ. ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಎಂ.ಎ., ಡಿ. ಲಿಟ್. ಅಥವಾ "ಅಂಬಿಕಾತನಯ ದತ್ತರು (ಅಂದತ್ತರು) ಈ ೨೦ನೆಯ ಶತಮಾನದ ಕನ್ನಡದ (ಕನ್ನಡ ಸಾಹಿತ್ಯ ಮತ್ತು ಜೀವನಗಳ) ಮಾರ್ಗದರ್ಶಕರಾದುದು ಅವರ ವಿಶ್ವಮುಖ ಪ್ರತಿಭೆಯಿಂದ. ಆ ಪ್ರತಿಭೆಯು ಪಾಂಡಿಚೇರಿಯ ಶ್ರೀ ಅರವಿಂದಾಶ್ರಮದ ಶ್ರೀ ಮಾತೆಯ ಕೃಪೆ. "ವಿಶ್ವತಶ್ಚಕ್ಷುರುತ ವಿಶ್ವತೋ ಮುಖೋ ವಿಶ್ವತೋ ಬಾಹುರುತ ವಿಶ್ವತಃ ಪಾತ್". ಅವರ **World-view** ವಿಶ್ವದರ್ಶನಕ್ಕೆ ಅವರ ಸಾಹಿತ್ಯದ ವಿರಾಟ್‌ಸ್ವರೂಪವೇ ನಿದರ್ಶನ. ಶ್ರೀ ಅರವಿಂದರ ಪ್ರಕಾರ ಅತಿಮಾನಸ ಪ್ರಜ್ಞಾಸ್ತರಗಳಿಂದ ಬಂದ ಸ್ಫೂರ್ತಿಯ ಉದ್ಗಾರಗಳು ಮಂತ್ರಗಳು; ಮಂತ್ರಕ್ಕಿಂತ ಮೇಲ್ಮಟ್ಟದ ಕಾವ್ಯವಿಲ್ಲ. ಮಂತ್ರವು ಕಾಣ್ಕೆ ಕಂಡದ್ದು: ಮಾನವ ಮಾನಸವು ಪ್ರಯತ್ನಪೂರ್ವಕವಾಗಿ ಬುದ್ಧಿಚಮತ್ಕಾರಗಳನ್ನು ಬಳಸಿ ಮಾಡಿದ್ದಲ್ಲ. ಕರ್ಮಾನುಸಾರಿಯಾದ ಮಾನವ ಬುದ್ಧಿಯು ಲೌಕಿಕ, ಕರ್ಮನಿರಪೇಕ್ಷವಾದ ಅತಿಮಾನಸ ಬುದ್ಧಿಯು ಅಲೌಕಿಕ, ವೈದಿಕ— "ವಿಶ್ವಸ್ಮಾದಿಂದ್ರ ಉತ್ತರ:". ವೈದಿಕ ಸೂಕ್ತಗಳು ಅಂತರರ್ಥಗರ್ಭಿತವಾದವುಗಳು, ಲೌಕಿಕದ ಮೂಲಕ ಹೊಳೆಯಿಸುವ ಅಲೌಕಿಕ ಸತ್ಯಗಳ ಆಕರಗಳು, ದಶದಿಕ್ ಶ್ಲೇಷಾರ್ಥಸಂಪನ್ನವಾದಂಥವುಗಳು. "ಕಂಡವರಿಗಷ್ಟೆ ಕಂಡವರಿಗಲ್ಲ ತಿಳಿದದ ಅದರ ನೆಲೆಯು" ಅರ್ಥಾತ್ ಶುದ್ಧಬುದ್ಧಿ-ಮಾತ್ರಗಮ್ಯ; ಶುದ್ಧಬುದ್ಧಿಯು ಅರಿಷಡ್ವರ್ಗಮುಕ್ತವಾದ, ಮನೂಕ್ತವಾದ ಆತ್ಮ. ಯೋಗಿಗಳಿಗದು ಸಹಜ, ನಿತ್ಯ; ವರಕವಿಗಳಿಗೆ ಅದು ಆಗಾಗ ಮೂಡಿ ಮುಳುಗುವ ಸ್ಫುರತ್‌ಪ್ರಭೆ. "ಮಿಂಚಿ ಮಾಯವಾಗುತಿತ್ತು ಒಂದು ಮಂದಹಾಸ". ಅದು ದಿವ್ಯ, ಪ್ರತಿಭಾತಿರಿಕ್ತ, ಸ್ಫೂರ್ತಿಜನ್ಯವೂ ಆದೀತು. **The Unconscious** ಎಂಬ ಸಾಗರಸಮುದಾಯದ ಪ್ರಜ್ಞಾಸ್ಫುಲಿಂಗವು ಮಾನಸದ ವಿಭೂತಿಮತ್ತಾದಮಟ್ಟದಲ್ಲಿ ಸೂಕ್ಷ್ಮಬುದ್ಧಿಗ್ರಾಹ್ಯವಾಗಿ,

ಪ್ರತ್ಯಕ್ಷಕ್ಕಿಂತ ಹೆಚ್ಚು ಪ್ರಾಭಾವಿಕವಾಗಿ ಮೂಡಿ ನಿಲ್ಲುವ ದೀರ್ಘಾವಧಿಕ ಕಾಣ್ಕೆಯು. ಅದಕ್ಕೆ ಇರುವ ವಾಕ್ಕವಚವು ಮಂತ್ರಾಕ್ಷರಮಯವು. ದ. ರಾ. ಅಂಕಿತಗಳುಳ್ಳ ಬೇಂದ್ರೆಯವರ ಸಾಮಾನ್ಯ ಪದ್ಯಗಳಲ್ಲಿಯೂ ಇಂಥ ಒಂದಲ್ಲಾ ಒಂದು ಸ್ಫುರದ್‌ರತ್ನವು ಕಣ್ಣಿದ್ದವರಿಗೆ ಕಾಣದಿರದು. ಮುನಿಗಳಲ್ಲಿ ನಾರದನು ದೇವಮುನಿಯಾದರೆ, ಇಂದಿನ ಕನ್ನಡ ಕವಿಗಳಲ್ಲಿ ಬೇಂದ್ರೆಯವರು ದೇವಕವಿ ಎಂದರೆ ಅತಿಶಯೋಕ್ತಿಯಾಗಲಾರದು. ಮಾನವೀಯ **Crookedness and falsehood** ವಕ್ರತೆ ಮತ್ತು ಅನೃತಗಳ ಕವಚವನ್ನು ಬಿಸುಟೊಗೆದಾಗ ಅದಾನವೀಯ ಅಥವಾ ದಿವ್ಯಪ್ರಜ್ಞೆ ಅವತರಿಸುತ್ತದೆ. "ಅಂಬಿಕೆ" ಎಂದರೆ ಅಂಥ ಆಗೀಗ ಮಿಂಚಿ ಮಾಯವಾಗುವ ಪ್ರತಿಭೆ ಮತ್ತು ಸ್ಫೂರ್ತಿಗಳ ಸ್ವರೂಪದ ಜ್ಞಾನಕ್ರಿಯಾಶಕ್ತಿಯ ಸಂಕೇತ. ಅಂಬಿಕೆ ಅನಸೂಯೆ: ಆತ್ರೇಯ ಅಥವಾ ಚತುರ್ಮುಖ ಸೌಂದರ್ಯ ದೇವತೆಯ (Supra-rational Beauty) ತನಯ. ಅವನು ಅಂಬಿಕಾತನಯನಾದ ಅಂಬಿಕಾದತ್ತ (Gift of the world Mother)— ಸುಕೃತ, ಆತ್ಮ, ರಸ, ಪೂರ್ಣಾಚಿತ್ಯದ ಆಕಾರ. ಅದರ ಪ್ರಕಾರಗಳು ರಸಪೂರ್ಣಜನ್ಯ ಸಚ್ಚಿದಾನಂದ ಕನ್ಯೆಯರು— ಪಾವಿತ್ರ್ಯದ ಪಾರ್ವತಿಯರು, ಬೇಂದ್ರೆಯವರ ಕಾವ್ಯಗಳು (ಗದ್ಯ–ಪದ್ಯ ಪ್ರಬಂಧಗಳು), ಕಲಾಕನ್ನಿಕೆಯರು ! ಸ್ಫುರತ್‌ಪ್ರಭಾಮಣಿಗಳು, ಅವರ ಫಣಾಲಂಕಾರಗಳು !

೧

ಪರಕವಿಯ ಮೂಡಲಮನೆ (ಉಷಾ ದೇವತೆಯ ಸೌಧ). ಮುತ್ತಿನ ನೀರಿನಿಂದ ಎರಕಹೊಯ್ದು ತಯಾರಿಸಿದುದು. ಜಗತ್ತು ಸತ್ಯಾನೃತಗಳ ಸಮ್ಮಿಶ್ರಣ ಅರ್ಥಾತ್ ಎರಕಹೊಯ್ದ ಬೆರಕೆಯ ಸಾಮಾನು. ಅವರ "ಗರಿ" ಇದನ್ನು ಸರಿಯಾಗಿ ಹೇಳಿದೆ. ಸತ್+ತ್ಯತ್=ಸತ್ಯ; ಕೇವಲ ಸತ್ ಎಂಬುದು ಋತಂ ಬೃಹತ್ತಾಗಿ ತೋರಿದ್ದು ಹೀಗೆ (ಶ್ರೀ ಅರವಿಂದರ "ವೇದರಹಸ್ಯ"ವನ್ನು ಓದಿರಿ). ಈ ಸಮಗ್ರ ಋತಂ ಬೃಹತ್=ಸಪ್ತನಾಕ+ಸಪ್ತನರಕಗಳ ನಾದ–ಬೀಜವು. ಮುತ್ತು=ಇಬ್ಬರು ಜೀವಿಗಳ ಸ್ನೇಹದ ಸಂಕೇತ. ಅದು ನೀರು= ಆಪಃ= ಕರ್ಮ= The dynamic aspect of Reality in

total harmony= ಜೀವಾತ್ಮ ಪರಮಾತ್ಮರ ಐಕ್ಯ— ಅದರ ಪ್ರಕಾಶವು ಉಷಃಕಾಲದಿಂದ ಸೂಚಿತ. ಆದುದರಿಂದ ಅದು ಪ್ರೀತಿಯಿಂದ ಮೈದೋರಿದ ಶಾಂತಿರಸ— ಬರಿಬೆಳಗಲ್ಲ. ಶಾಂತಿಯು ರಸರಾಜ. ರಸ ಏವ ಅಯಂ ಲಬ್ಧ್ವಾ ಆನಂದೀ ಭವತಿ: "ಘನರಸ ಆನಂದ, ಆನಂದ ದ್ರವರಸ" ಎಂದು ವರಕವಿ ಹೇಳಿದ್ದು ತೈತ್ತಿರೀಯ. ಆನಂದೋ ಬ್ರಹ್ಮೇತಿ ವ್ಯಜಾನಾತ್ ! ತಿತ್ತಿರಿ ಸಂಗ್ರಹಿಸಿದ್ದು ವೈದಿಕ ಜ್ಞಾನಲವಗಳನ್ನು. ಅದರಿಂದಲೇ ಬೇಂದ್ರೆಯವರು ಉಡುಪಿಯಲ್ಲಿ ಡಾ. ಶಿವರುದ್ರಪ್ಪನವರ ಮಾತಿಗೆ ಪ್ರತಿಯಾಗಿ ಬೇಂದ್ರೆ ನವೋದಯನಲ್ಲ, ಪ್ರಗತಿಶೀಲನಲ್ಲ, ನವ್ಯನಲ್ಲ: ಬೇಂದ್ರೆ "ವೇದಕವಿ" ಎಂದು ಸಾರ್ವಜನಿಕವಾಗಿ ಘೋಷಿಸಿದರು. "ವೇದೋ ಧರ್ಮ ಮೂಲಂ"— ಕಾವ್ಯಧರ್ಮಸ್ಯಾಪಿ ಮೂಲಂ !

ಬೆಳಗಿನಂತೆಯೇ ಪಾತರಗಿತ್ತಿಯ ಪದ್ಯವೂ ಕೇವಲ ಸಾಮಾನ್ಯವಾದ ಶಿಶುಗೀತವೆಂದು ಭಾವಿಸಲಾಗುತ್ತದೆ. ಆದರೆ ಬೇಂದ್ರೆಯವರ ಪಾತರಗಿತ್ತಿಯು ಪಕ್ಕಾ (ಸೂಕ್ಷ್ಮಜ್ಞೆಯು) ಆಗಿದ್ದಾಳೆ. ಅವಳು ಪಾತರಗಿತ್ತಿ ಅಥವಾ ಜಗದ್ರೂಪದ ವ್ಯಭಿಚಾರಿ ಭಾವ **(The changing world)**, ಏಳು ಅಥವಾ ಏಳೇಳಲೆ ಬಣ್ಣಗಳನ್ನು ಪ್ರತಿನಿಧಿಸುವ ಚಂಚತ್ ಪ್ರಪಂಚದ ಸಂಕೇತ. "ಇನ್ನು ಎಲ್ಲಿಗೋಟ, ನಂದನದ ತೋಟ" ಎಂಬುದು ಆ ಪದ್ಯದ ಕೊನೆಯ ಸಾಲು. ಪ್ರಾಪಂಚಿಕ ಜೀವನದ ವಿರಾಮಸ್ಥಾನವು "ನಂದನ"— "ಯಸ್ಯ ಬ್ರಹ್ಮಣಿ ರಮತೇ ಚಿತ್ತಂ ನಂದತಿ ನಂದತಿ ನಂದತ್ಯೇವ". ನಂದನವು ಇಂದ್ರೋದ್ಯಾನ. ಇಂದ್ರನು ದಿವ್ಯಮಾನಸಾಧಿದೇವತೆಯು. ಅವನು ಸ್ವರ್ ಎಂಬ ವೇದೋಕ್ತ ಅತ್ಯುಚ್ಚ ಆನಂದ ಪ್ರಜ್ಞಾಸ್ಥಲದ ನಿವಾಸ. ನಂದನವು= ಸ್ವರ್ (ಮೂರನೆಯ. ಪ್ರತ್ಯಾಹಾರ). ಆದುದರಿಂದ ಪಾತರಗಿತ್ತಿಯಂಥ ಸಾಧಕಜೀವಕ್ಕೆ ಅಂತ್ಯಸಿದ್ಧಿಯು ನಂದನ ಸೂಚಿತವಾದ ಸಚ್ಚಿದಾನಂದವು. ಅದು ಶ್ವೇತ: ಶ್ವೇತೇತರವಾದ ಸರ್ವವರ್ಣಗಳ ಐಕ್ಯಸ್ಥಲ. ಸಪ್ತವರ್ಣಗಳು ಏಳು ಪಟ್ಟಾದಾಗ ೪೯ ಮರುದ್ಗಣವಾಗುತ್ತವೆ. ಅದು ಬಿಸಸಂಖ್ಯೆ ಅರ್ಥಾತ್ "ತೀರದ ತೋರದ ಹಾಳು ಸಂಸಾರದ" ಅನಂತ ಪ್ರವಾಹಕ್ಕೆ ಪ್ರತೀಕ (ಬ್ರಹ್ಮಸೂತ್ರ ಭಾಷ್ಯದ ಶಾಂಕರ ಟೀಕೆಯನ್ನೋದಿರಿ). ಈ ಅನಂತವು ಮಾನವ ಮಾನಸಾತೀತವಷ್ಟೆ. **Absolute Infiinite** ಏಕಮೇವಾದ್ವಿತೀಯ ಬ್ರಹ್ಮ-

ವಲ್ಲ. ಪಾತರಗಿತ್ತಿಯು ವೇಶ್ಯಾರ್ಥವುಳ್ಳಪದವೂ ಆದುದರಿಂದ ಮಾನವ ಮನಸ್ಚಾಂಚಲ್ಯಕ್ಕದು ಪ್ರತೀಕ." ಚಂಚಲಂ ಹಿ ಮನಃ ಕೃಷ್ಣ" (ಗೀತೆಯನ್ನೋದಿರಿ).

ಬೇಂದ್ರೆಯವರ ಮಾಯಾಕಿನ್ನರಿಯು ಮಾಯೆ. ಇಂದ್ರಜಾಲದಿಂದ ಬಂದ ಸುಂದರಿ. ಇಂದ್ರನ ಜಾಲವು ಪ್ರಕೃತಿ. ಪ್ರಕೃತಿಯು ಪ್ರಪಂಚಮಾತೆ, ಪುರುಷನು ಪ್ರಪಂಚದ ತಂದೆ. ಪತ್ನೀತ್ವದಿಂದ ಮಾಯೆಯು ಪುರುಷ ಸಾಮರಸ್ಯೇಚ್ಛು. "ಪುರುಷ ಏವೇದಂ ಸರ್ವಂ ಯದ್ ಭೂತಂ ಯಚ್ಚ ಭವ್ಯಂ". ಪ್ರಕೃತಿಯನ್ನು ಪುರುಷನ ಶಕ್ತಿ ಎಂದು ಕರೆದರೆ "ಶಕ್ತಿ – ಶಕ್ತಿಮತೋರಭೇದಃ" ಆಗುತ್ತದೆ. ಭಾರತೀಯ ತರ್ಕಶಾಸ್ತ್ರವು ಅದರಿಂದಲೇ ಶಕ್ತಿಗೆ ಪ್ರತ್ಯೇಕ ಪದಾರ್ಥತ್ವವನ್ನು ಕೊಟ್ಟಿಲ್ಲ. ಇದನ್ನರಿಯದವರು ಶಕ್ತಿಯ ಅನಿರ್ವಚನೀಯತೆಯನ್ನು (ಅಸಮರ್ಥನೀಯವಾಗಿ) ಸ್ವೀಕರಿಸರು. ಪ್ರಕೃತಿಯು ಪುರುಷನ ಒಂದು ಆವಿರ್ಭಾವ; ಪುರುಷನಲ್ಲೇ ಅದರ ಆತ್ಯಂತಿಕ ಅಂತರ್ಭಾವ.

"ಪ್ರಕೃತಿ ಪುರುಷಗೆ ಸೋತು
ಪ್ರಾಣದ್ಬಂಜಿಯು ನೂತು
ಅನುಭವದ ಸವಿಮಾತು ಆದ್ಹಾಂಗ"

ಆ ಸವಿಮಾತೇ ಮಂತ್ರ, ಆರ್ಷಕಾವ್ಯ. ಪುರಿ ಶೇತೇ ಇತಿ ಪುರುಷಃ— ಪ್ರಕೃತಿಯು ಪುರುಷನ ಪುರ. ಊರ್ಣನಾಭ ಜಾಲ: "ಒಡಲ ನೂಲಿನಿಂದ ನೇಯುವಂತೆ ಜೇಡಜಾಲ". ಇದು ಸೃಷ್ಟಿಯ **Projection and introjection** ಸಿದ್ಧಾಂತ, ಸಂವರ್ಗವಿದ್ಯಾಜ್ಞೇಯ.

"ಆತನೀತನವಂತ ಯಾತನದ ಯಾತನೆಯ
ಯಾತ ಕಿರುಗುಟ್ಟೋದು ನಿಂತ್ಹಾಂಗ
ನಾನೀನ ನುಡಿನುಂಗಿ ತಾನೀನ ತಾನೇ ತಾ
ತಾನಾಗಿ ತನನನ ಅಂದ್ಹಾಂಗ"

ಎಂದರೆ "ನಚತ್ವಂ ನಾಚಾಹಂ ನಚಾಯಂ ಪ್ರಪಂಚಃ": "ಸರ್ವಂ ಖಲ್ವಿದಂ ಬ್ರಹ್ಮ, ತಜ್ಜಲಾನಿತಿ ಶಾಂತ ಉಪಾಸೀತ". ಮಂತ್ರವು ಉಪಾಸನಾ ಸಾಧನ.

ಬ್ರಹ್ಮದ ಕಾರಣಶರೀರವು ವಿರಾಟ್ ಪುರುಷನು. ಶ್ರೀ ಅರವಿಂದರ Theory of transformation ಪರಿವರ್ತನಸಿದ್ಧಾಂತವು ಪುರುಷಸೂಕ್ತಪ್ರೇರಿತ. ಅದು ಬೇಂದ್ರೇ ಸಂಮತ. ಆದುದರಿಂದ ಬೇಂದ್ರೆಯವರ ಪದ್ಯಗಳಲ್ಲಿ ಅದು ಹಾಸುಹೊಕ್ಕಾಗಿದೆ.

"ಕನ್ನಡವೂ ಭಾರತವೂ ಜಗವೆಲ್ಲವು ಒಂದೇ"
"ನಿನನಲ್ಲ ಎಲ್ಲರಲಿ ಒಂದ
ಒಂದ ನೂರೊಂದ
ಅದರ ಸವಿ ಮುಂದ
ತೋರುವರವಿಂದೋಂ"
"ಜೀವವನುಭವಿಸುತಿತ್ತು ಅನಂತ್ಯದೊಂದು ಅಚ್ಚುಕಟ್ಟು
ಭಕ್ತಿಹೃದಯ ಪಡೆದಿತ್ತು ಭಗವದಾನಂದ ಹೊತ್ತುಬಿಟ್ಟು".

ಈ ಪರಿವರ್ತನ ತತ್ತ್ವವನ್ನು ಮಾನಸೋತ್ತರ ಪ್ರಜ್ಞಾಸ್ತರಗಳಿಗೂ ಅನ್ವಯಿಸುವ ಅರವಿಂದ ಪದ್ಧತಿಯಲ್ಲಿ "ಅನಂತಗಳು = ಅನಂತದ ಅಚ್ಚುಕಟ್ಟುಗಳು" ಬಹುವಚನದಲ್ಲಿ ಬರುವುದು ಸಾಪೇಕ್ಷವಾದ ಸಾಲೋಕ್ಯ, ಸಾರೂಪ್ಯ (almost the Same) ಎಂಬ ಮೋಕ್ಷಸ್ಥಿತಿಗಳು. ಸಾಯುಜ್ಯವು ಬಹುವಚನರಹಿತ ಸ್ಥಿತಿ. ಅದನ್ನು ಮೊದಲಿನೆರಡು ಉದ್ಧೃತವಾಕ್ಯಗಳು ನಿದರ್ಶಿಸುತ್ತವೆ— Unity in Diversity) ಇದು ಒಗ್ಗದವರಿಗಾಗಿ (Diversity in Unity) ಪದ್ಧತಿಯ ಅನಂತಗಳು, ಪರಮಸುಖಿಗಳು, ಪರಮಾನಂದಗಳು ಮುಂತಾದ ಸಾಪೇಕ್ಷ ಬಹುವಚನಗಳ ಅನಂತಗಳು ಅರವಿಂದೋಕ್ತ ("The Secret of the Veda") ವನ್ನು ಓದಿರಿ. "ಹೊತ್ತುಬಿಟ್ಟು"— Transcending Spatio- temporal Consciousness ಎಂಬ ಪದವನ್ನಿಟ್ಟದ್ದು ಮೊದಲಿನೆರಡು ಉದಾಹರಣೆಗಳಿಗೆ ಬರುವ ವ್ಯಾಹತಿಯನ್ನು ತಪ್ಪಿಸಲೆಂಬುದನ್ನು ತಿಳಿಯಲು ಕಣ್ಣುಬೇಕು. ಕೇವಲ = ಸಮಗ್ರ ಪೂರ್ಣೈಕ್ಯಯೋಗವು ಅಂಶಾಂಶಿ ಭಾವಬದ್ಧವಲ್ಲ. ಅಂಶಾಂಶೀಭಾವವು ಭಕ್ತರಿಗೆ, ಜ್ಞಾನಿಗಲ್ಲ. ಭಕ್ತ = ವಿಭಕ್ತ. ಜ್ಞಾನೀ = ಆತ್ಮ = ಏಕಮೇವಾದ್ವಿತೀಯ ಸಚ್ಚಿದಾನಂದ. ಇದು ಬೇಂದ್ರೆಯವರ ಜ್ಞಾನನಿಷ್ಠ ಭಕ್ತ್ಯಾವೇಶ ಸೂತ್ರವು— ಭಕ್ತನಿಷ್ಠ ಜ್ಞಾನದ ಅಂಥಂತವಸ್ಸಲ್ಲ.

"ಗುರುಶಿಷ್ಯರ ಸಂವಾದ ಬೇಕು
ಅಭೇದಲ್ಲಾ ಭೇದ ಬೇಕು;
ಭೇದಾಭೇದ (ಬೇಕು)—
ಅಭೇದ ಬೇಕು—
ನಾದ ಬೇಕು ನಾದ ಬೇಕು, ಕೊನೆತನಕಾನೂ ನಾದ ಬೇಕು"

ಭೇದ, ಭೇದಾಭೇದ. ಅಭೇದಗಳ ಉತ್ತರೋತ್ತರತೆ ಹೀಗೆ.

"ವಿದ್ಯಾರಣ್ಯರ + ಅಭೇದ ಬೇಕು

ಎಂಬುದು ಅಧರಾಧರತೆಯ ವಿನ್ಯಾಸ. ಆಮೇಲೆ

"ಅರವಿಂದರ ಆಮೋದ ಬೇಕು" ಎಂಬುದು ಭೇದಾಭೇದಗಳ ಸಾಮರಸ್ಯಸೂಚಕ. ಅನಂತರ "ದಾಸಶರಣರ ಸಂವಾದಬೇಕು" ಎಂಬುದು ತತ್ಪೋಷಕವಾದ ವಿಚಾರ. ಕೊನೆಯದಾದ –

"ಏಕೀಕರಣಕ್ಕೆ ಕಾದಬೇಕು"— ವೈವಿಧ್ಯವನ್ನು ಅಳಿಸಿಹಾಕುವ ಏಕೀಕರಣದ ಸಾಮರಸ್ಯ (ತಾದಾತ್ಮ್ಯ) ಎಂಬುದರಲ್ಲಿ ವಿದ್ಯಾರಣ್ಯರ ಮಾತಿನಲ್ಲಿ ಚೆನ್ನಾಗಿ ಸ್ಪಷ್ಟವಾಗಿಲ್ಲ ಎಂದು ಭಾವಿಸಿ Fight for Unification ಎಂಬ ಅರವಿಂದಗಂಥ ಪುನರುದಯಿಸಿದೆ. ಆ ಅಸ್ಪಷ್ಟತೆಯನ್ನು—

"ಗುರೋಸ್ತು ಮೌನಂ ವ್ಯಾಖ್ಯಾನಂ" ಎಂಬ ಪೂರ್ವಜೋಕ್ತಿಯಲ್ಲಿ ಅರವಿಂದರಂತೆಯೇ Staticism ನಿಷ್ಕ್ರಿಯ ಅಚಲತೆಯನ್ನು ಅಂತ್ಯಾವಸ್ಥೆ ಎಂದು ತಿಳಿದುಕೊಂಡು, ಅದನ್ನು ತಿದ್ದಲೆಂದು

"ಕಲ್ಲಿಗೂ ನೀರಿಗೂ ಏನು ಜತೆ (ಜೊತೆ) ?"

ಎಂಬ ನಿದರ್ಶನವನ್ನಿತ್ತು ಬೇಂದ್ರೆಯವರು "ಮೌನದಲ್ಲಿಯೂ ಕೂಡಾ ಮಾತಿನ ಧ್ವನಿಯಿರಲಿ, ಮೂಕ ಮೌನವು ಒಂದು ಶಾಪದೊಲು" ಎಂದು ವಿವರಿಸಿದರು. ಆದ್ದರಿಂದ ನಾದ ಬೇಕು, ಸಾಧನೆ ಮಾಡಬೇಕು, ನಾದ ಸಾಧನ ಬಳಸಬೇಕು ಎಂದು "ಜೀವಲಹರಿಯು" "ನಾದ ಬೇಕು" ಎಂಬುದರಲ್ಲಿ ಸಮಗ್ರಯೋಗವನ್ನು ಧ್ವನಿಸಿದ್ದಾರೆ. ಇದು ವ್ಯಾವಹಾರಿಕ Pragmatism ಪ್ರಯೋಜನವಾದವನ್ನವಲಂಬಿಸಿದ ಅಧ್ಯಾತ್ಮ ರಾಜಯೋಗವು.

"ನಾಕು ತಂತಿಯ" ಕೊನೆಯ ಸಾಲಿನಲ್ಲಿ "ದಧ್ಯಂಕನನ್ನೈಜ" ವನ್ನು ಉಪ ಸಂಹಾರಕ್ಕೆ ಬಳಸಿಕೊಳ್ಳಲಾಗಿದೆ. ದಧ್ಯಂಕನು "ದಧ್ಯಂಚ್" ಎಂಬ ವೇದ ಋಷಿ. ಅವನೊಬ್ಬ ಅಂಗಿರಸ್. ಅಥರ್ವನ್ ಎಂಬ ಋಷಿಯ ಮಗನಾದ ದಧ್ಯಂಚನು (ದಧ್ಯಂಜ). ಅವನು ಹಯವದನ (ಅಶ್ವತ್ಥಾಮ) = ದಧೀಚಿ = ವಜ್ರಾಸ್ಥಿಯುಕ್ತ ಇಂದ್ರಾಯುಧ, ೯೯ ವೃತ್ರರನ್ನು ಸಂಹರಿಸಿದ ಆಯುಧಸ್ವರೂಪನು. ವೃತ್ರಪದವು ದಸ್ಯು, ಪಣಿ, ಅಹಿ, ಅನಾರ್ಯ, ದೈತ್ಯ, ಮ್ಲೇಚ್ಛ ಮುಂತಾದ ಪದಗಳಿಂದ ಸೂಚಿತವಾದ ಭಾವರೂಪದ ಬಲಿಷ್ಠ ಅಜ್ಞಾನದ ಸಂಕೇತವಾಗಿದೆ. ಅತ್ಯಂತಾಭಾವವು ಅಕಲ್ಪನೀಯ. ದಿವ್ಯಸಂಕಲ್ಪರೂಪದ ಸಚ್ಚಿದಾನಂದನು ದಧ್ಯಂಚನ ಸತ್ಯ— ಅರ್ಥಾತ್ Absolute Truth ಸರ್ವನಿರಪೇಕ್ಷ ಸತ್ಯ. ಅದರಲ್ಲಿ ೯೯ ಅಜ್ಞಾನರೂಪದ ಭಾವವೂ ಅನುಸ್ಯೂತವಾಗಿರುವುದೇ, ನಾದ-ಪ್ರತಿನಾದಗಳಿಗೆ ದೇವ + ಜೀವ ಮಯಜಗತ್ತುಗಳ ಕಲ್ಪನೆಗೆ ಆಸ್ಪದವಾಯಿತು. ಭಗವದ್ಗೀತೆಯಲ್ಲಿ ಈ ಅನುಪಾತವು ೮ : ೧ ಕಣಿಕೆ = ಕಣಿಕ = ಪ್ರಪಂಚದ್ರವ್ಯ = ಆಣವಿಕ ಪಂಚ ಭೂತಗಳು. ಅವುಗಳಿಂದಾದ "ಭೂಮಿರಾಪೋsಗ್ನ್ಯನಿಲಗಗನಂ ಜೀವ ಮಹಾಹುಃ ಕ್ರಮೇಣ" ಜೀವಂಜೀವನೇ ಆತ್ಮಶೋಧಕ. ಅವನ ಮನೋಬಲವು ಇಂದ್ರವಜ್ರವಾಗಿರಬೇಕು. ಮುಂದಿನುಪದೇಶವು ವೈಖರಿಗೆ ಮೀರಿದುದು. ದಧ್ಯಂಕನ ಸತ್ಯವು ಬೇಂದ್ರೆಯವರ ಸಾಧಕತ್ವದ ಮಟ್ಟದ ಸಂಕೇತವು.

ಸಾಹಿತ್ಯದ ಅಭಿಜಾತ ಮತ್ತು ಜಾನಪದ ಎಂಬ ವರ್ಗೀಕರಣದಲ್ಲಿ ಭಾಷೆಯೂ ಸೇರಿದೆ, ಭಾವಪ್ರಕಟನ ರೀತಿಯೂ ಸೇರಿದೆ, ಭಾವ ಭೇದವೂ ಸೇರಿದೆ. ಆದರೆ ಬೇಂದ್ರೆಯವರ ಕಾವ್ಯದಲ್ಲಿ ಭಾವಗಳ ಅಭಿಜಾತ್ಯವು ಅವಿಚ್ಛಿನ್ನವಾಗಿದೆ: ಅವುಗಳಲ್ಲಿ ಗ್ರಾಮ್ಯತೆ ಇಲ್ಲ. "ಇನ್ನು ಯಾಕ ಬರಲಿಲ್ಲವ್ವಾ ಹುಬ್ಬಳ್ಳಿಯಾಂವಾ" ಎಂದು ಹೇಳಿದಾಗಲೂ ಅದರ ಸಾರವು "ಎದೀ ಮ್ಯಾಲಿನ ಗೆಣೆತನ" = Most sincere Friendship— ಜೀವ - ದೇವೈಕ್ಯ ಪ್ರಕೃತಿ ಪುರುಷೈಕ್ಯ, ಅಚಿತ್ತಿನ ಚಿದೀಕರಣ— ಎಂಬ ಧ್ವನಿ ಆ ಜಾನಪದ ಪಾತ್ರದ ಹೃದಯದಿಂದ ಸಂಕೇತವಾಗಿ ಹೊರಹೊಮ್ಮುತ್ತದೆ. ಪದಪಿಟ್ಟಳಿಪ್ರಗಲ್ಭಿಕೆಯ ಕುಮಾರವ್ಯಾಸನಾದ ಮೇಲೆ ಬೇಂದ್ರೆಯವರಿಗೇ ಮೀಸಲು. ಹುಬ್ಬಳ್ಳಿಯ ಶಾಸನದಲ್ಲಿ ಪೂರ್ವಕಾಲ್ಲೀ ಪುರವಾದರೂ ಕವಿದೃಷ್ಟಿಯಲ್ಲಿ ಭ್ರೂಲತಾಭಿಜ್ಞ

ಸುಂದರಿಯರಾದ ಉಷೆಯರ ಊರು. ಕಾಳಿದಾಸನನ್ನು "ಮೇಘದೂತದಲ್ಲಿ" ಕೇಳಿರಿ; ಭ್ರೂಮಧ್ಯಸ್ಥಿತ ಆಜ್ಞಾಚಕ್ರವನ್ನು ಕೇಳಿರಿ. "ಭ್ರೂವಿಲಾಸಾನಭಿಜ್ಞ" ಅರಸಿಕರಿಗದು ತಿಳಿಯದು "ಜ್ಞಾನಂ ಮಹೇಶ್ವರಾದಿಚ್ಛೇತ್" ಎಂಬುದು ಗೊತ್ತಿಲ್ಲದವರಿಗೆ ಗೊತ್ತಾಗದು. ಸ್ನೇಹ, ದಯೆ, ಸೌಮಿತ್ರಿ, ಜಾನಕಿಯರಲ್ಲಿ ರಾಮನದು ಸಸೂತ್ರ. ಪ್ರಾಥಮ್ಯ, ಪ್ರಾಮುಖ್ಯ— ಇಲ್ಲಿ ಹುಡುಕಹೋಗುವದು ಕೇವಲ ಸಾಮಾನ್ಯಲೌಕಿಕ. ಹಾಗೇ "ವಾರದಾಗ ಮೂರು ಸರ್ತಿ ಬಂದು ಹೋಗುವವನು"— ಇಡಿವಾರವೆಲ್ಲಾ ಜೊತೆಗಿರ-ದಾತನು "ಅರ್ಥಾತ್ ಸಹಜಸಮಾಧಿಸ್ಥಿತಿಯನ್ನು" ಇನ್ನೂ ದಯಪಾಲಿಸದಿರುವವನು; ಪ್ರಯತ್ನಶೀಲ ಮುಗ್ಧಜೀವವು ಆ ಹುಬ್ಬಳ್ಳಿಯವನನ್ನು ನೆನೆಯುತ್ತದೆ, ಶ್ರೀಕೃಷ್ಣನನ್ನು ಸ್ಮರಿಸುತ್ತದೆ. ಅಂತರರ್ಥಕ್ಕೇ ಪ್ರಸಿದ್ಧರಾದ ವೇದರ್ಷಿಗಳಂತೆ ವೇದಕವಿ ಬೇಂದ್ರೆಯವರೂ ಅದಕ್ಕೇ ಪ್ರಸಿದ್ಧರು. ಆದುದರಿಂದ ಇಲ್ಲಿ ನೇಯರ್ಥಹೇಳಲಾಗಿದೆ ಎಂದು ಹೇಳಲು ಯಾರಿಗೂ ಹಕ್ಕಿಲ್ಲ. ವೈರಾಗ್ಯವು ಭಾಷೆಯಲ್ಲಿ ಜ್ಞಾನಿಯ, ವಸ್ತುನಿಷ್ಠ ರಾಗ-ದ್ವೇಷರಾಹಿತ್ಯವಾದರೆ, ಭಕ್ತನ Universal Love ವಿಶ್ವಪ್ರೇಮ (Not the love for a particular person. place or thing= ಯಾವುದಾದರೂ ಒಂದು ವ್ಯಕ್ತಿ, ಸ್ಥಳ ಅಥವಾ ವಸ್ತು ಎಂಬುದರ ಪ್ರೇಮದ ವಿಷಯವಲ್ಲ) ಎಂದಾಗುತ್ತದೆ. ಇದರಿಂದ ಜ್ಞಾನ-ಭಕ್ತಿಗಳಲ್ಲಿ ದ್ವಂದ್ವವಿಲ್ಲ, ಐಕ್ಯವಿದೆ ಎಂಬುವನ್ನು ತಿಳಿದುಕೊಳ್ಳಬಹುದು. ಪೂರ್ವೋಕ್ತ ಹಾಡಿನ ನಾಯಕನು ದಾಕ್ಷಿಣ್ಯ (ಔದಾರ್ಯ) ಶೀಲನು. ಔದಾರ್ಯ = ಔದಾತ್ತ್ಯ = ನಿಃಸೀಮ= ಪೂರ್ವೋಕ್ತ ವರುಣ, ನಿರುಪಾಧಿಕ ವಿಸ್ತಾರ, ಸತ್. ಈ ವೈಶ್ವಾತ್ರಿಕತೆಯ ಸ್ಥಾಯಿಭಾವದ ಬಲೆಯಿಂದಲೇ ಬೇಂದ್ರೆಯವರು ಕನ್ನಡನಾಡನ್ನು ಹೊಗಳಲು ಹೋಗಿ "ಕನ್ನಡವೂ ಭಾರತವೂ ಜಗವೆಲ್ಲವು ಒಂದೇ" ಎಂದು ಉದ್ಗರಿಸಿದುದು! ಇದನ್ನು ಮರೆತವನು ಬೇಯದ (ಅಪಕ್ವ) ಬೇಂದ್ರೆ: ಅರಿತವನು ಬೆಂದ (ಪಕ್ವಹೃದ್‌ಬುದ್ಧಿಗಳನ್ನುಳ್ಳ ಸಹೃದಯ) ಬೇಂದ್ರೆ !

ಶ್ರೀ ಅರವಿಂದರು ಹೇಳಿದ ಜೀವಾತ್ಮದ ಉತ್ತರೋತ್ತರ ಪ್ರಜ್ಞಾಸ್ತರಗಳ ಮೂಲಕ ಆಗುವ ಅದರ ವಿಕಾಸದ ನೆಲೆಗಳನ್ನು ಬೇಂದ್ರೆಯವರ ಪದ್ಯಗಳು ಧ್ವನಿಸುವುದೂ ಉಂಟು. ಅವರು ತಮ್ಮ "ಗರಿಯಲ್ಲಿ" ಬಣ್ಣಿಸಿದ

ನಿದ್ರೆಯು ೯೯% Inconscience ಅತಿಹೆಚ್ಚಿನ ಅಜ್ಞಾನಾಂಧಕಾರವು. ಅದು ಬಹುಶಃ ಕಲ್ಲಿನಿಂದ ಸಂಕೇತಿತವಾಗಬಹುದು. "ಆ ಬ್ರಹ್ಮಸ್ತಂಬ ಪರ್ಯಂತಂ" ಎಂಬುದನ್ನು ಹೋಲಿಸಿರಿ. Involution ಅವಕಾಸದ ಹಂತಗಳನ್ನು ವಿಕಾಸಗಳ ಹಂತಗಳಿಂದ ಊಹಿಸಿಕೊಳ್ಳಬಹುದು. ಅಧಃಪಾತದ ಮಜಲುಗಳನ್ನು ಉತ್ಪಾತದ ಸ್ತರಗಳಿಂದ ನಿಗಮನಿಸಬಹುದು. ಆದರೆ ಉತ್ತರಣವೇ ನಮಗೆ ಮುಖ್ಯವಾದುದರಿಂದ ನಮ್ಮ ಪ್ರಜ್ಞಾಸ್ತರವನ್ನರಿತುಕೊಂಡು ಅದರ ಮುಂದಿನ ಸ್ತರಕ್ಕೆ ಏರುವುದಕ್ಕೆ ಪ್ರಾಧಾನ್ಯವನ್ನು ಕೊಡಲಾಗಿದೆ.

ಬೇಂದ್ರೆಯವರಿಗೆ "ಮಾತೃದೇವೋಭವ" ಎಂಬುದೇ ಮಹಾದರ್ಶವು. ಅವರು—

"ಮೈಯೆಲ್ಲಾ ಬಾಯಿ ನೀನು
ತುಟಿಮುದ್ದು ಹಾಲುಂಜೇನು"

ಎಂದು ಹೇಳಿದ್ದರಲ್ಲಿ ಭೂಮಿತಾಯಿಯ ವಾತ್ಸಲ್ಯದ ಪರಾಕಾಷ್ಠೆಯನ್ನು ಪ್ರಣೋದನಿರ್ಝರವಾಗಿ ಪ್ರಕಟಿಸಿರುವುದು ಅನನ್ಯ. ಹಾಗೇ ಅದೇ ಪದ್ಯದಲ್ಲಿ "ತಾವು ಎಲ್ಲಿ ಬಿದ್ದರೂ ಭೂಮಿಯ ಮೇಲೇ ಬೀಳುತ್ತೇವೆ" ಎಂಬ ಅಭಿಪ್ರಾಯವನ್ನು ಹೇಳಿದ್ದು ಚಮತ್ಕಾರವೂ ಹೌದು, ವಸ್ತುಸ್ಥಿತಿಯೂ ಹೌದು. ಅದಿವ್ಯದ ಅಂತಃಸಾರವೆಂಬುದು ದಿವ್ಯವು: ಜಡದಲ್ಲಿ ಜೀವವನ್ನು ಗುರುತಿಸುವ ಪ್ರವೃತ್ತಿಯು ಶುದ್ಧ ಭಾರತೀಯ. ಹಾಗೆ ಗುರುತಿಸಿಬಿಟ್ಟರೆ ಸಾಲದು: ಆ ಅಂತಃಸಾರದ ಪ್ರಜ್ಞೆಯಿಂದ ಬಹಿರಾವರಣವೆಲ್ಲವನ್ನೂ ಆವರಿಸಿ ಪವಿತ್ರೀಕರಿಸುವ ದಿವ್ಯೀಕರಣ (Divinisation) ವಿದ್ಯೆಯೇ ಅಧ್ಯಾತ್ಮವಿದ್ಯೆ. ಕೇವಲ ಮಣ್ಣು–ಕಲ್ಲುಗಳ ಭೂಮಿಯು ವೇದೋಕ್ತವಾಗಿ ಪೃಥಿವೀದೇವಿಯು ಎಂಬ ಪ್ರಜ್ಞಾವಿಸ್ತರಣವು ಸಾಧನೆಯು. ಪೃಥಿವಿಯ ಮಟ್ಟದಿಂದ ಮೇಲೆ ಏರುತ್ತಾ ಹೋದರೆ "ದ್ಯೌಃ" ದಿವ್ಯತ್ವದ ವಿಸ್ತಾರವಾದ ಬಯಲು. ದ್ಯಾವಾಪೃಥಿವಿಗಳು ಪ್ರಪಂಚಕ್ಕೆ ಹಾಕಿದ ಬ್ರಾಕೆಟ್ಟುಗಳು. ಕೆಡುಕಿನ ಪಾತಾಳದಿಂದ ಒಳಿತಿನ ಸ್ವರ್ಗ (ವೈದಿಕ: ಪೌರಾಣಿಕವಲ್ಲ) ವನ್ನು ತಲುಪುವುದೂ ಸತ್ವಗುಣ ಪ್ರಪಂಚದ ಪರಮಸಿದ್ಧಿಯು, ವರುಣಲೋಕ ಪ್ರಾಪ್ತಿಯು. ಅದರಾಚೆ ಸಚ್ಚಿದಾನಂದ ಪರಮಸತ್ಯಪ್ರಜ್ಞೆಯು ಅಸೀಮವಿಸ್ತಾರ— "ಸತ್ಯಂ ಜ್ಞಾನಂ ಅನಂತಂ ಬ್ರಹ್ಮ".

"ಕಾಲೂರಿತು ಮಳೆ
ಕತ್ತೆತ್ತಿತು ಬೆಳೆ"

ಎಂಬ ಮಾತಿನ ಮಾರ್ಮಿಕತೆ ಕನ್ನಡದಲ್ಲಿ ಬಂದ ಬಂಧದ ಸಾಂದ್ರತೆಯ ಪ್ರಣೋದಕ್ಕೆ ಉದಾಹರಣೆ. (Showering of Grace) ದಿವ್ಯಮಾತೆಯ ದಿವ್ಯಕರುಣೆಯ ಅಮೃತಧಾರೆ ಬಿದ್ದಕೂಡಲೇ ವಿಕಾಸಪರವಾದ ಜೀವಾತ್ಮವು ಪುರೋಗಮನದತ್ತ ಜಾಗ್ರತ್ ಆಗುತ್ತದೆ. ಇಲ್ಲಿಯ ಮೋಡವು ವೃತ್ರಾ ಸುರನಲ್ಲ, ಕತ್ತಲ ಸಂಕೇತವಲ್ಲ: ಬೆಳಕಿನ ಸಂಕೇತ. ಬೆಳಕು (ಜ್ಞಾನ) ಉತ್ಸಾಹಜನಕ, ಆಹ್ಲಾದಜನಕ. ಮೋಡವಿಲ್ಲಿ ತಾನೇ ತಾನಾಗಿ ಹನಿಯೊಡೆ ಯಿತು: ಅರ್ಥಾತ್ ನಮ್ಮ ಸಂಕಲ್ಪಕ್ಕೆ ತನ್ನ ಹತ್ತಿರ ಬರಬೇಕೆಂಬ ಸಚ್ಚಿ- ದಾನಂದನ ಸಂಕಲ್ಪವು ಆಧಾರ. ದಿವ್ಯವು ಮಾನವ್ಯವನ್ನು ದಿವ್ಯೀಕರಿಸಿ ಕೊಳ್ಳಲು ನಮಗಿಂತ ಮೊದಲೇ ನಿರ್ಧಾರ ಮಾಡಿಕೊಂಡಿರುತ್ತದೆ. ಆ ನಾದಕ್ಕೆ ನಮ್ಮ ನಾದವನ್ನು ಸಮಶ್ರುತಿಗೊಳಿಸಿದರೆ ಸಾಕು. ಅದು ಉದ್ಧಾರ ಪಥದಲ್ಲಿ ನಮ್ಮ ನಿತ್ಯಾಂತರಾತ್ಮವನ್ನು (ಅರಿಷಡ್ವರ್ಗರಹಿತ ಜೀವಾತ್ಮನನ್ನು) ಕರೆದುಕೊಂಡು ಹೋಗುತ್ತದೆ. ಇದು ಪಾರಮಾರ್ಥಿಕವಾದ ದೃಢ ಪ್ರತ್ಯಾಶಾ- ವಾದ— ಅರ್ಥಾತ್– ವೇದಧರ್ಮಸಾರ. ಆದರೆ ವಿಕಾಸಪಥಕ್ಕೆ ವಿಘ್ನ ಗಳುಂಟು. ಮಾನವನು ಒಂದು ಹೆಜ್ಜೆ ಮುನ್ನಡೆದರೆ, ಕೆಲವೊಮ್ಮೆ ಹತ್ತು ಹೆಜ್ಜೆ ಕೆಳಗೆ ಬೀಳುತ್ತಾನೆ. ಇದು ಸಹಿಷ್ಣುತೆಯ ಪರೀಕ್ಷೆಯು. ಅವುಗಳನ್ನು ಮತ್ತೆಗೆದ್ದು ಮೊದಲಿನ ನೆಲೆಯನ್ನು ಮುಟ್ಟಿ ಮತ್ತೆ ಮುನ್ನಡೆಯಿಡಲು ಪ್ರಯತ್ನಿಸಬೇಕು. ಈ ವಿಘ್ನಗಳು ಮಾನವನಿಗೆ ದಿವ್ಯಶಕ್ತಿಗಳನ್ನು ಪ್ರಾರ್ಥಿ- ಸಲು ಕೊಡುವ ಪ್ರೇರಣೆಗಳು. ಅಮುಕ್ತ ಜೀವನದಲ್ಲಿ ಅಂತರಂಗದ ಪ್ರಾರ್ಥನೆ ಪ್ರಧಾನ. ಸೂಕ್ತಗಳೆಲ್ಲಾ ಪ್ರಾರ್ಥನೆಗಳು: ಸ್ತೋತ್ರಶೈಲಿ ಯಲ್ಲಿರುವ ಮಂತ್ರಗಳು. ಬೇಂದ್ರೆಯವರ ಬಹುಸಂಖ್ಯಾತ ಪದ್ಯಗಳ ಒಳ ಗುಟ್ಟು ಇದು. ಭಾರತದ ಸ್ವಾತಂತ್ರ್ಯವನ್ನವರು "ಯಾವುದೋ ಅನುಗ್ರಹ ದಿಂದ ಸಿಡಿದ ಬೆಳಗು" ಎಂದಿದ್ದಾರೆ. ಆ ಅನುಗ್ರಹಕ್ಕೆ ಅಂತಃಪ್ರಾರ್ಥನೆಯು ಮೂಲಕಾರಣ, ನೋಡಿರಿ :

"ಇದು ಕಟ್ಟಿದ್ದಲ್ಲ ನೂತು
ಮುತ್ತು ಇಟ್ಟಾಗ ಬಂದವು ಮಾತು

ತಮಗೇ ತಾವು ಸೋತು
ತಮಗೇ ತಾವು ಸೋತು"

ಈ ಬೇಂದ್ರೆಯೇ ಬೇಂದ್ರೆ: ಅಂಬಿಕಾ ವರಪ್ರಸಾದಲಬ್ಧ ವಾಗ್ವಿಕಾಸ ಸಾಧನ. "ವಾಗ್ವೈಸಮ್ರಾಟ್ ಪರಮಂ ಬ್ರಹ್ಮ" !

"ನಾಕು ತಂತಿಯ" ೧೫ನೆಯ ಪುಟದಲ್ಲಿ ಬಂದ ಸ್ಪರ್ಶವು ಸ್ಪರ್ಶವು. ದರ್ಶನದ ಬೆಳಕು ದರ್ಶನವೆಂಬ ಬೆಳಕು. ಅದು ಸ್ವಪ್ನಭಿನ್ನವಾದ ತಾತ್ಕಾಲಿಕ ಜಾಗ್ರತ್ ಸಮಾಧಿಗಳಲ್ಲಿ ಒಂದು. ಜಾಗ್ರತ್ =ಸವಿಕಲ್ಪ ಅಥವಾ ಸಂಪ್ರಜ್ಞಾತ: ಅದರ ಭೇದಗಳು ವಿತರ್ಕ, ವಿಚಾರ, ಆನಂದ, ಅಸ್ಮಿತೆ ಎಂದು. ಆ ಸಂಪ್ರಜ್ಞಾತ ದರ್ಶನವು ಅನಿರ್ವಾಚ್ಯವಲ್ಲ, ಪರಾವಾಕ್ ಸೂಚ್ಯ. ಅನಿರ್ವಚನೀಯ ಖ್ಯಾತಿಯು ವಿವರ್ತ, ಮಾಯೆ, ದೈವಿಕ ಇಂದ್ರಜಾಲ, ಮಾನವ ಮನೋಭ್ರಾಮಕವಾದ ಶಕ್ತಿ = Power of Transformation = Power of Delusion = ಅತಿಮಾನಸಪ್ರಣೋದವು Supramental force (Will). ಅದೇ ಸೃಷ್ಟಿಕೃನ್ನಾದವೆಂಬ ಸಂಕಲ್ಪಕಾರಣವು.

"ನಾದೇನ ವ್ಯಜ್ಯತೇವರ್ಣಃ ಪದಂ ವರ್ಣಾತ್ ಪದಾದ್ವಚಃ
ವಚಸೋ ವ್ಯವಹಾರೋಽಯಂ ನಾದಾಧೀನಮಿದಂಜಗತ್"

ಎನ್ನುತ್ತಿದೆ ಸಂಗೀತರತ್ನಾಕರವು. ಅದೇ ಸ್ಪಂದಮೂಲವಾದ ಕ್ರಿಯಾರಂಭವು.

"ನಕಾರಂ ಪ್ರಾಣನಾಮಾನಂ ದಕಾರಮನಲಂ ವಿದುಃ ।
ಜಾತಃ ಪ್ರಾಣಾಗ್ನಿ ಸಂಯೋಗಾತ್ತೇನ ನಾದೋಽಭಿಧೀಯತೇ ॥

ಇದು ನಾದದ ಹುರುಳು : Vital Energy, + Heat Energy ಬೇಂದ್ರೆಯವರ ಅನಿರ್ವಾಚ್ಯವು ಅತೀಂದ್ರಿಯ, ಅತಿಮಾನಸ ಏಕಮೇವಾದ್ವಿತೀಯ ಪರಮಸತ್ಯವು ಎಂದು ತಿಳಿದುಕೊಳ್ಳಬೇಕು. ಹಾಗೇ ಅವರ ನಾದವು (ಕಂಪನಾರಂಭಮೂಲ) ಮೂಲಾಧಾರಮೂಲ, ಕುಂಡಲಿನೀ ಶಯನಸ್ಥಲ. ಮಧ್ಯಮ, ಪಶ್ಯಂತಿ, ವೈಖರಿಗಳು ಆ ಪರಾನಾದದ ಅವತರಣಗಳು. ವಾಚ್ಯವರ್ಣಗಳು ವೈಖರಿಯ ಹೂರಣ. ಅವರ ಮೂಲಕ ಶಬ್ದವು "ಶ್ರುತಿ" ಆಗಹೋದಾಗ ಉದ್ವೇಲಹಾನಿಗೀಡಾಯಿತು. ಆದರ ದುರಸ್ತಿಗ ಶ್ರೀ ಅರವಿಂದರು ಬರಬೇಕಾಯಿತು. ಮಾತಿನ ಅಂತ್ಯವು ಸತ್ (Existence)

ಆನಂದ

ಚಿತ್ (Consciousness) ಮತ್ತು (Bliss – Consciousness). ಅಂತೆ ಇರುವುದು ಸಚ್ಚಿದಾನಂದದ ಆ ಸಚ್ಚಿದಾನಂದಾಭಾಸವು. ಜಗತ್ತು "ತತ್ತು-ಲ್ಯತ್ವೇ ಸತಿ ತದ್ಭಿನ್ನತ್ವಂ" ಎಂಬ ಜಾತಿಗೆ ಸೇರುತ್ತದೆ. "ಅಂತೆಯು" ತುಲನಾರ್ಥದಲ್ಲಿದೆ. ಜಗದ್ಭಾವ (World–Consciousness) ಎಂಬುದು ಸಚ್ಚಿದಾನಂದದಲ್ಲಿ ಅಭಾವರೂಪ "ಭಾವ"ವಾಗಿರುತ್ತದೆ. ಅಕಾರದ (ನಕಾರದ) ಅರ್ಥಗಳು : ೧) ಸಾದೃಶ್ಯ: ೨) ಪ್ರಾಕ್ – ಪ್ರಧ್ವಂಸ ಅನ್ಯೋನ್ಯಾಭಾವಗಳು-ವೇದಾಂತಾನುಸಾರ; ೩) ಅನ್ಯತ್ವ: ೪) ಅಲ್ಪತ್ವ: ೫) ಅಪ್ರಾಶಸ್ತ್ಯ: ೬) ವಿರೋಧ. ತಾರ್ಕಿಕ ಅತ್ಯಂತಾಭಾವವು ಸಮವಾಯ ನಿರಸನದಿಂದ ನಿರಸ್ತವಾಗಿದೆ. ಅರವಿಂದರ ಅನಿತ್ಯ ಸತ್ಯವು ನಿತ್ಯಸತ್ಯದಿಂದ ಭಿನ್ನ. ಶಾಂಕರ ಮಿಥ್ಯೆಗೆ ಅನಿತ್ಯ ಸತ್ಯವು ಪರ್ಯಾಯವಾಗಿ ಬಳಸಲ್ಪಟ್ಟಿದೆ. "ಅದೃಷ್ಟದ ದೃಷ್ಟಿಯು" ದತ್ತ. ಯಾರಿಂದ ? ದೃಶ್ಯಕದಿಂದ, ದೃಶ್ಯದ ದರ್ಶಕನಾದ Intuitve Consciousness ಪ್ರಾತಿಭಪ್ರಜ್ಞೆಯಿಂದ. "ಕವಿಯು ಶಾಸ್ತ್ರಾಭ್ಯಾಸ, ಪ್ರತಿಭೆ, ಪ್ರಜ್ಞೆ, ಕಾವ್ಯಸಂಸ್ಕಾರ, ಪ್ರಭಾವ ಇವುಗಳನ್ನು ಮೀರಿ ಉತ್ತರಿಸಿ ಕಾವ್ಯಮಾಡಬೇಕು" ಎಂಬ ಮಾತಿಗೆ ಅಕ್ಷರಾರ್ಥವಿಲ್ಲ. ಇದ್ದರವಲ್ಲಾ "ದಿವ್ಯಪ್ರತಿಭೆ" ಎಂಬ ಪದದಲ್ಲಿ ಅರವಿಂದ ಶಾಸ್ತ್ರಾನುಸಾರ ಅಡಕವಾಗುತ್ತದೆ. ದಿವ್ಯತೆಯು Superhuman, Supra rational Super sensuous ಅಥವಾ Supramundane ಅಲೌಕಿಕ. ಹೀಗೆ ಹೇಳಿದ್ದರೆ ಬೇಂದ್ರೆಯವರ ಮಾತು ಅರ್ಥವಿಲ್ಲದ ಒಣ ಚಮತ್ಕಾರವಾಗುತ್ತದೆ: ಅದು ಕಾವ್ಯಸೂತ್ರವಾಗದು. ದೃಶ್ಯಾದೃಶ್ಯ ವಿವೇಕ. ಭೇದಾಭೇದ ವಿವೇಕ, ವಿವೇಕಾವಿವೇಕಗಳ ವಿವೇಕ, ಲೋಕಾಲೋಕ ವಿವೇಕ, ಕಾಲತ್ರಯ ವಿವೇಕ, ದೇಶ ವಿವೇಕ. ಶತ್ರುಮಿತ್ರ ವಿವೇಕ. ಕಾಮ–ಪ್ರೇಮ ವಿವೇಕ, ಸಾಧನ-ಸಾಧ್ಯ ವಿವೇಕ— ಎಂಬವುಗಳೊಳಗೆ ಬೇಂದ್ರೆಯವರ ೧೩ ಕಾವ್ಯಸೂತ್ರಗಳು ಅಡಕವಾಗುತ್ತವೆ. ಶ್ರೀ ಅರವಿಂದರ ಚತುರ್ದಶ ಪ್ರಜ್ಞಾಸ್ತರಗಳ ಹೊರಗೆ ವೇದಕವಿಯೆಂದೂ ಹೋಗನು. ಅವುಗಳಲ್ಲಿ ಮಾನಸಶಾಸ್ತ್ರವಿಲ್ಲ, ಅತ್ಮ ಶಾಸ್ತ್ರವಿಲ್ಲ: ದರ್ಶನವೂ ಇಲ್ಲ, ಸಾಕ್ಷಾತ್ಕಾರವೂ ಇಲ್ಲ !

ಯುಗವು ಕಾಲವಾಚಕವಾದರೆ ಅದಕ್ಕೆ ಆದಿಮಧ್ಯಾಂತಗಳಿರುತ್ತವೆ. ವೇದದಲ್ಲಿ "ಲೇಟ್" ಎಂದರೆ ಕೂಡಾ ಅಸೀಮ ವರ್ತಮಾನವಲ್ಲ. ಅಸೀಮವು

ಕೋಶಾತೀತ; ಕೋಶವು (ಪಂಚಕೋಶಾದಿ ಪದ) ಸಸೀಮ. ವೃತ್ತವೂ ಕೋಶವಂತೆಯೇ ಪರಿಧಿ. ಸಾದಿಯು ಸಾಂತ, ಅನಾದಿಯು ಅನಂತ (ಅಕ್ಷರಶಃ). ಆತ್ಮ, ಪರಮಾತ್ಮ, ಅಂತರಾತ್ಮಗಳ ವಿವೇಕವು ಸಾಧಕನಿಗೆ ಅಗತ್ಯ: ಸಿದ್ಧನಿಗೆ ಅರ್ಥಾತ್ ದಿಕ್ಕಾಲಾದ್ಯನವಚ್ಛಿನ್ನನಿಗೆ ಇಲ್ಲ. ಆದುದರಿಂದ ಪದಾರ್ಥ ವೈವಿಧ್ಯವನ್ನು ವೈಖರಿಯು ಬಿಡಲಾರದು— ಅದರಲ್ಲೂ "ಶಬ್ದಾರ್ಥೌ ಸಹಿತೌ ಕಾವ್ಯಂ" ಆಗಿರುವವರೆಗೆ ಎಂಬುದನ್ನು ಬೇಂದ್ರೆ ಅವರ "ಸಾಹಿತ್ಯ ಮತ್ತು ವಿಮರ್ಶೆ" ಎಂಬ ಗ್ರಂಥವು ಸ್ಪಷ್ಟಪಡಿಸುತ್ತದೆ.

ಬೇಂದ್ರೆಯವರ ಬಹುಭಾಷಾಪದಗಳ ಮಿಶ್ರಣವು ಮತ್ತು ತದಾಧೃತ ಶ್ಲೇಷಗಳು "ಶಬ್ದಕ್ರೀಡೆ". "ಸೋ" ಮತ್ತು "ಡೂ" ಗಳು ಅವರ ಶಬ್ದ ಬ್ರಹ್ಮತ್ವದ ಅಧಿಕಾರವಾಣಿಗೆ ಮಾದರಿಗಳು. "ವಾಚಮರ್ಥೋನುಧಾವತಿ" ಶೈಲಿಯಲ್ಲಿ ಬರೆದ ಅವರ ಕವನಗಳಿಗೆ ಇಂಗಿತಾರ್ಥವಿರುವುದು ಅವರ "ಮಾಸ್ಟರ್" ಪ್ರಜ್ಞೆಗೆ ಮೀರಿದ್ದಾಗಿದೆ. ಅರ್ಥವನ್ನು ಕೇಳಿದ ಕೆಲವರಿಗೆ "ಅದನ್ನು ನೀವೇ ಹುಡುಕಿಕೊಳ್ಳಿರಿ" ಎಂದು ಅವರು ಉತ್ತರ ಕೊಟ್ಟದ್ದುಂಟು. ಅಜ್ಞಾನದ **ಯಾ** ಸುಜ್ಞಾನದ ಏಳೇಳು ಸ್ವರಗಳಾಚೆಗಂತೂ (ಅವರೇ ಒಪ್ಪಿರುವಂತೆ) ಶಬ್ದಕ್ಕೆ ಅರ್ಥವಿಲ್ಲ— ಅಥವಾ ಶಬ್ದವೇ ಇಲ್ಲ. ಹಾಗೇ ಕಾಮ + ಮೋದಗಳಿಂದ, ಕಾಮೋದಯು ತುಳಸಿಯಾದ ಅಪ್ರಸಿದ್ಧ ಪುರಾಣ ಪ್ರತೀಕಗಳ ಪ್ರಯೋಗಗಳೂ ಆರ್ಷ, ಅನನ್ಯ. ಶ್ರೀ ಅರವಿಂದ-ಪಂಥದ ನಾಲ್ಕು ಕನ್ನೆಯರು, ನಾಲ್ಕು ದೇವಿಯರು, ನಾಲ್ಕು ಸೌಂದರ್ಯಗಳು ಮುಂತಾದವುಗಳ ಮೂಲವು "The Mandala Theory" ಪ್ರಾಚೀನ ಭಾರತದ ಯೋಗಿಗಳ ಪರಂಪರೆಯಲ್ಲಿದೆ ಎಂಬುದನ್ನು ಕಾರ್ಲ್. ಜಿ. ಯುಂಗ್ ಮಹಾಶಯನ ಗ್ರಂಥ ಸಂಪುಟಗಳಲ್ಲಿ ನೋಡಬಹುದು: ಅದು ಮಂಡಲ ಎಂಬ ತಾಂತ್ರಿಕ ಸಿದ್ಧಾಂತದ ಗೂಢಾರ್ಥಕ್ಕೆ ಸೂಚಕ.

ಬೇಂದ್ರೆಯವರು "ಓಜಸ್ತೇಜೋದ್ಯುತಿಧರಃ" ಎಂದು ಕಾಣಿಸುವುದು ಪುನಃ ಪುನಃ ಬರುವ ಅವರ ಶ್ರಾವಣ ಸಂಬೋಧನೆಯಲ್ಲಿ. ಶ್ರವಣ ಜನ್ಯವಾದುದು ಶ್ರಾವಣಃ ಶ್ರವಣವು ಶ್ರುತಿಮೂಲ. ಶ್ರುತಿಯು ಆರ್ಷ ಯೋಗಾನುಭೂತಿಗಳ ಉದ್ಗಾರಸಮೂಹವು. ಯೋಗ ಎಂಬುದು ಅನೇಕ

ವ್ಯಾಖ್ಯೆಗಳಿಗೊಳಪಟ್ಟಿದ್ದರೂ Mysticism ಎಂಬ ಆಂಗ್ಲಪದವು ಸ್ಪಷ್ಟತರಾರ್ಥಸೂಚಕವಾಗಿದೆ. ಅದು ಮನೋಬುದ್ಧ್ಯಹಂಕಾರ ಚಿತ್ತಾದಿಗಳಿಗೆ ಅಗಮ್ಯವಾದ ಜೀವಾತ್ಮ – ಪರಮಾತ್ಮರ ಐಕ್ಯದ ಆನಂದೋನ್ಮಾದ ಮಗ್ನತೆಯಲ್ಲಿ ಬಾಲೋನ್ಮತ್ತ ಪಿಶಾಚರಂತೆ ವರ್ತಿಸುತ್ತಿರುವುದು, ಸಮಾಧಿಸ್ಥವಾಗಿರುವುದು, ಧ್ಯಾನ ಮೌನಮಗ್ನತೆಯಲ್ಲಿ ಮೈಮರೆತಿರುವುದು— Unknowing Knowing= Unlearning what we ordinarily learn to believe as facts or realities. "Agnostica" ಎಂದು ಅದರ ಸಾಧನದ ಹೆಸರು.

ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ"
"ಅತೀಂದ್ರಿಯಂ ಸೂಕ್ಷ್ಮಮನಂತಮಾದ್ಯಂ"
"ಯದಾಲೋಚನೇ ರೂಪಮನ್ಯತ್ ಸಮಸ್ತಂ"
"ಪಶ್ಯತ್ಯಾತ್ಮಾನಮಾತ್ಮನಿ"
"ವಿಯದ್ವ್ಯಾಪಕತ್ವಾದಖಂಡೈಕರೂಪಃ"

Losing oneself in —

"ಬ್ರಹ್ಮಾನಂದಂ ಪರಮಸುಖದಂ ಕೇವಲಂ ಜ್ಞಾನಮೂರ್ತಿಂ
ದ್ವಂದ್ವಾತೀತಂ ತ್ರಿಗುಣರಹಿತಂ ತತ್ವಮಸ್ಯಾದಿಲಕ್ಷ್ಯಂ ।
ಏಕಂ ನಿತ್ಯಂ ವಿಮಲವಚನಂ ಸರ್ವದಾ ಸಾಕ್ಷಿಭೂತಂ
ಭಾವಾತೀತಂ ಭವಭಯಹರಂ......"

ಪೂರ್ಣವಲ್ಲದುದು ಯೋಗವಲ್ಲ; ಯೋಗವಿಲ್ಲದೆ ಪೂರ್ಣತ್ವವಿಲ್ಲ. ಅಪೂರ್ಣ ಯೋಗಗಳು ಯೋಗಗಳಲ್ಲ: ಪೂರ್ಣತೆಯಲ್ಲಿ ವೈವಿಧ್ಯವಿಲ್ಲ. ಆದುದರಿಂದ ಶ್ರಾವಣವು ಯೋಗಮಾಯಾ ಲೀಲಾಪ್ರದರ್ಶನವು. ಅದು Bendre Special- ಬೇಂದ್ರೆಯವರ ವಿಶೇಷಾಕರ್ಷಣೆ ಎನ್ನಬಹುದು. "ಹಾಡು ಪಾಡಿನಲ್ಲಿಯ" ಶ್ರಾವಣವು ಬೇಂದ್ರೆಯವರ ಧೀರೋದಾತ್ತ ವ್ಯಕ್ತಿತ್ವವನ್ನು ಗಮಕದ ಗತ್ತುಗಳ ಮೂಲಕ ವ್ಯಕ್ತಪಡಿಸುತ್ತದೆ.

“ಗುಡ್ಡ ಗುಡ್ಡ ಸ್ಥಾವರಲಿಂಗ
ಅವಕ ಅಂಭ್ಯಂಗ

ಎರಿತಾವನ್ನೋ ಹಂಗ
ಸುತ್ತೆಲ್ಲ ನೋಡ ನೋಡ ”

ಎಂಬ ಸಾಲು ನಿರಾಕಾರ ಸಚ್ಚಿದಾನಂದನನ್ನೂ “ಜಗದ್ಗುರು ಹುಟ್ಟಿದಮಾಸ। ಕಟ್ಟಿನೂರುವೇಷ। ಕೊಟ್ಟಸಂತೋಷ” ಎಂಬ ಸಾಲುಸಾಕಾರ ಸಚ್ಚಿದಾನಂದನನ್ನೂ ಅವನ ಸೃಷ್ಟಿಯ ಉದ್ದೇಶವನ್ನೂ ಸೂಚಿಸುತ್ತವೆ. ಲಿಂಗವು ವಿಶ್ವ: ಸಚ್ಚಿದಾನಂದ ನಿಃಸೀಮತೆಯ ಸಂಕೇತ. ಶ್ರೀಕೃಷ್ಣನು ಜಗದ್ಗುರು. ಅವನು ಅವತಾರಪುರುಷ Descent of the divine— ಸತ್ಪಾತ್ರನಾದ ಭಕ್ತನನ್ನು ಅನುಗ್ರಹಿಸಲು ಇಳಿದುಬಂದ ನಾಮರೂಪಧಾರಿ, ಸಾಕಾರ-ಸಂಕೇತ. ಶ್ರಾವಣದ ಮಳೆ ಆವರಣಶುದ್ಧೀಕರಣದ ಉದ್ದೇಶವುಳ್ಳದ್ದು. ಈ ಶ್ರೀಕೃಷ್ಣನು. ಆಗಸ್ಟ್ ೧೫ ರಂದು ಜನಿಸಿದ ಶ್ರೀಅರವಿಂದರ ಪ್ರತಿನಿಧಿ ಎನ್ನುವುದಿಲ್ಲಿ ಸಾಂದರ್ಭಿಕ. ಆಲೀಪುರ್ ಜೈಲಿನಲ್ಲಿ ಶ್ರೀ ಅರವಿಂದರಿಗಾದದ್ದು ಶ್ರೀಕೃಷ್ಣದರ್ಶನವೆಂದು ಪ್ರಸಿದ್ಧ. ಬೇಂದ್ರೆಯವರ ನಾದಪಾಂಚಾಲಿ. ಎಲ್ಲಿ ಹೋದರೂ ಅವರನ್ನು ಬಿಡದು. ಪಾಂಚಾಲಿ = the Style in which the Sound and the Sense are blended together. ಲಿಂಗಾಭ್ಯಂಗ ಮಾಡುತ್ತಿರುವ ಮೋಡವು. ನೋಡಲು ಪೂಜೆಗೆ ಕುಳಿತಪುರೋಹಿತ. ಜಗದ್ಗುರುವಿನ ವೇಷಗಳು—ಸಂತೋಷ (Divine Delight) ಉಂಟು ಮಾಡುವಂತೆ ಕುಣಿದು ದಣಿಯುತ್ತವೆ. “ಸಂತೋಷಂ ಜನಯೇತ್ ಪ್ರಾಜ್ಞಸ್ತ-ದೇವೇಶ್ವರ ಪೂಜನಂ” ಎಂಬುದಿಲ್ಲಿ ಧ್ವನಿತ – ಅದು ದಿವ್ಯಗುಣ – ಮಾನವ ಕಲಿಯಬೇಕಾದದ್ದು —ದೇವನಿಂದ.

“ಜೀವ–ಲಹರಿ” ಎಂಬುದರಲ್ಲಿ “ಇದು ವೈಷ್ಣವ” ಎಂದು ಪ್ರಾರಂಭವಾಗಿ “ಇಂಗಿಸುವ ವಿಚಿತ್ರ” ಎಂಬುದರಿಂದ ಮುಗಿಯುವ ಪದ್ಯವು ನಶ್ವರ ಪ್ರಪಂಚದಲ್ಲಿ ಮೂಡಿದ ನಾನಾ ಮತಧರ್ಮಗಳು ಈ ಪ್ರಪಂಚ ಇದೆಯೋ ಇಲ್ಲವೋ ಎಂಬ ವಾದವನ್ನು ನುಂಗಿ ನೊಣೆಯುವುದು ವಿಚಿತ್ರವೆಂದು ಹೇಳಲಾಗಿದೆ. ಇದು ವೇದಾಂತದ ಮಹಾಪ್ರಶ್ನೆ. ಇದು ಇದೆ= ನಿಜ ಎಂದರೂ ಈ ಪ್ರಪಂಚದ ಸ್ವಭಾವವು ಬದಲಾಗದು: ಇಲ್ಲ ಎಂದರೂ ಬದಲಾಗದು. ಹಾಗೇ ಶಾಶ್ವತ ಅವಿಕಾರಿಯಾದ ವಿಶ್ವಜನಕ ಸಚ್ಚಿದಾನಂದ ಈ ಚಿತ್ರದಲ್ಲಿ ತನ್ನ ಶಾಶ್ವತತೆಯನ್ನು ಧ್ವನಿಸಿದ್ದಾನೆ !

"ನಾಽಸತೋ ವಿದ್ಯತೇ ಭಾವಃ । ನಾ ಭಾವೋ ವಿದ್ಯತೇಽಸತಃ ॥" ಎಂಬ ಮಾತಿನ ಹೂರಣವು ಶಂಕರರೆಂದಂತೆ ಭ್ರಮೆ – ಭ್ರಮೆಗಳೋ ಅಥವಾ ಅರವಿಂದರಂತೆ ಎಲ್ಲವೂ ಸತ್ಯ ತಾರತಮ್ಯಗಳೋ (Degrees of truth) ಎಂಬುದನ್ನು ನಿರ್ಣಯಿಸುವ ಸ್ವಾತಂತ್ರ್ಯ ವ್ಯಕ್ತಿಗಿದೆ. Being= ಭಾವ= ಸತ್= ಅಸ್ತಿತ್ವ: ಅವಿಕಾರಿ ಸತ್ಯ, ಶಾಶ್ವತ ಸತ್ಯ. ಹಾಗೇ Becoming= ಪರಿವರ್ತನ= ನಾಮಾಂತರ, ರೂಪಾಂತರ ಹೊಂದುವುದು. ಭಾವಕ್ಕೆ ನಾಮರೂಪಗಳಿಲ್ಲ— ಅದು "ಅಸ್ತಿ. ಭಾತಿ, ಪ್ರಿಯ" ಎಂಬ ಪದಗಳಿಂದ. ಸಂಕೇತಿತ; ಅದು ಅಸೀಮ, ಅವಿರತ, ಸಾಕ್ಷೀಭೂತ ಜಾಗರ. ಇದು "ಹೊತ್ತುಹೊತ್ತಿಗೆ ಒಂದು ರೂಪ" ತಾಳಿ "Change is the law of life" ಎಂದೂ ಹೇಳುತ್ತದೆ. ಇವೆರಡರ ಐಕ್ಯಸ್ಥಿತಿ. ಭಿನ್ನಸ್ಥಿತಿ ಮತ್ತು ಭೇದಾಭೇದಸ್ಥಿತಿಗಳ ಬಗೆಗೆ ಎದ್ದ ವಾದಗಳನ್ನು ಬ್ರಹ್ಮಕಾವ್ಯವಾದ "ಸಾವಿತ್ರಿಯೂ" ಇದಮಿತ್ಥಂ ಎಂದೆನ್ನಲಿಲ್ಲ ! ಆತ್ಮಶೋಧಕನ ಆತ್ಯಂತಿಕ ಅನುಭವವೇ ಅವನಿಗೆ ಇದಮಿತ್ಥಂ !

ಬೇಂದ್ರೆಯವರ ಪದ್ಯಗಳೆಲ್ಲಾ ವೇದಾಂತಗರ್ಭಿತವಾದವುಗಳೇ ? ಹೌದು. ವೇದಾಂತದಲ್ಲಿ ವ್ಯಾವಹಾರಿಕ, ಪ್ರಾತಿಭಾಸಿಕ ಮತ್ತು ಪಾರಮಾರ್ಥಿಕ ಎಂಬ ದೃಷ್ಟಿತ್ರಯವಿದೆ. ಒಂದರ "ರೂಲ್ಸ್" ಇನ್ನೊಂದಕ್ಕೆ ಸರ್ವವಿಧದಲ್ಲೂ ಅನ್ವಯಿಸದು ಎಂಬುದನ್ನು ಅನೇಕರು ಮರೆತು ಮರುಳರಾಗುತ್ತಾರೆ— "ವಿಮೂಢಾನಾನುಪಶ್ಯಂತಿ । ಪಶ್ಯಂತಿ ಜ್ಞಾನಚಕ್ಷುಷಃ". ವೇದಾಂತವು ಜೀವನಶಾಸ್ತ್ರವು. ಜೀವನವು ನಶ್ವರಾನಶ್ವರಗಳೆಲ್ಲವುದಕ್ಕೂ ಒಂದರ್ಥದಲ್ಲಿ ಸಂಕೇತವು. ಗೀತೆಯು "ಅನುವರ್ತನ—ಅನುಸ್ಮರಣೆಗಳನ್ನು ಒತ್ತಿ ಹೇಳಿದರೆ, ಈ ಪ್ರವೃತ್ತಿ ಇಲ್ಲದವನಿಗೆ ಅಭ್ಯಾಸ — ವೈರಾಗ್ಯಗಳು (Obtaining mastery by repetition - Developing a perfectly objective view of everything, including oneself, impartially) ದಕ್ಕಲಾರವು. ಈ ಸ್ಥಿತಿ ಸಿದ್ಧಿಸದೆ ಹೋದರೆ ಯಾವ ಬಗ್ಗೆಯ ಯೋಗ ಹಿಡಿದರೂ. ಸಂನ್ಯಾಸ ಹಿಡಿದರೂ ಯಾರಿಗೂ ಜೀವನದ ಅರ್ಥವಾಗದು ಇದು ಅಜರಾಮರ ಗೀತೋಪದೇಶ, ಅಖಂಡಿತ ಗೀತಾಬೋಧ. ಆದುದರಿಂದ, ಮಹಾವಿಡಂಬನ ಚಾತುರ್ಯದಿಂದ ಬೇಂದ್ರೆಯವರು —

"ಗಾಂಧೀ ಜಯಂತಿ ದಿನ ಸತ್ಯವಸ್ನಾಡೋಣ
ಸುಳ್ಳಿಗೋ ಇಡಿ ವರುಷ ತೆರವೆ ಇಹುದು"

ಎಂದು ಅಂಗೈ ಹುಣ್ಣಿಗೆ ಕನ್ನಡಿ ಹಿಡಿದೂ ತೋರಿಸಿದ್ದಾರೆ. ಗಾದೆ ಸುಳ್ಳಾದರೂ ವೇದ ಸುಳ್ಳಾಗದು. ಆಷಾಢಭೂತಿಗಳ ರಾಜ್ಯಭಾರವೀಗ

"ಚಕ ಚಕ ಚಂಚಲ । ಮಿಂಚಿನ ಗೊಂಚಲ
ಚಕಮಕಿ ಚಲಮುಲ" ಎಂಬ ರೀತಿಯು

ಪ್ರಚಾರ ವೈಭವದಿಂದ ಮತದಾರರನ್ನು ಮರುಳುಮಾಡುತ್ತಿದೆ. "ಯಥಾ ರಾಜಾ ತಥಾ ಪ್ರಜಾಃ" ಮತ್ತು "ರಾಜಾ ಕಾಲಸ್ಯಕಾರಣಂ" ಏಕೆಂದರೆ—

"ನಾ ತೊಟ್ಟ ದೇಹಗಳ ಲೆಕ್ಕ
ಇಡುವರಾ ಸೊಕ್ಕ
ಯಮಾ ನೋಡಿ ನಕ್ಕ"

ಎಂಬುದೂ ಗೀತೋಕ್ತ ಸತ್ವದ ಕೃಷ್ಣಾವತಾರಗಳ ಉಲ್ಲೇಖ, ಅರ್ಜುನಾವತಾರಗಳ ಉಲ್ಲೇಖ: ಇಲ್ಲಿದೆ ದತ್ತಾವತಾರಗಳ ಉಲ್ಲೇಖ. "ಅತ್ರಿ" ಅಂದರೆ ನಾಲ್ಕನ್ನುತ್ತಿದ್ದ ಬೇಂದ್ರೆಯವರ ಆತ್ರೇಯತೆ ಎಲ್ಲೆಲ್ಲೂ ಗೆದ್ದುಕೊಂಡೇ ಬರುತ್ತದೆ. ಅವರ ಮೂರ್ತಿತ್ರಯೈಕ್ಯಭಾವವು ಅವರ ಸಾಹಿತ್ಯದ ಸಾರ, ರಸ, ಸ್ವಾದ. ಒಳನೋಟಕ್ಕಿದು ಕಂಡೇ ಕಾಣುತ್ತದೆ—

"ಅದು ನಮ್ಮ ಊರು ಇದು ನಿಮ್ಮ ಊರು
ತಂತಮ್ಮ ಊರೊ ಧೀರಾ ।
ಅದರೊಳಗೆ ನಾವು ನಮ್ಮೊಳಗೆ ತಾವು
ಅದು ಇಲ್ಲ ಬಹಳ ದೂರ ॥"

"ಭೂತವೂ ಜಡಜಾತವೂ । ಅದರೊಳೋತಪ್ರೋತವು". ಹಾಸುಹೊಕ್ಕುಗಳ ಉದಾಹರಣೆಯು ಬೇಂದ್ರೆಯವರ ಸಾಹಿತ್ಯ, ತಾದಾತ್ಮ್ಯ ಹಾಗೂ ಜಗಜ್ಜೀವ ದೇವರುಗಳ ಸಂಬಂಧದ ಸಮಗ್ರಾದ್ವೈತವನ್ನು ಪದೇ ಪದೇ ಹೇಳುತ್ತದೆ. ಅವರ ಒಳಹೊಕ್ಕು ಅದು ಸಂಕೇತಿಸುವ ಅಂತರಾರ್ಥವನ್ನು ನಿರ್ಣಯಿಸಿಕೊಳ್ಳಲು ಪ್ರತಿಯೊಬ್ಬ ವ್ಯಕ್ತಿಯೂ ಸ್ವತಂತ್ರನು. ಅವನವನು ತನ್ನ ತನ್ನ ಪ್ರತ್ಯಕ್ಷ, ಪರೋಕ್ಷ, ಅಪರೋಕ್ಷ (Direct realisation of

Truth) ಎಂಬ ಅನುಭವಗಳ ವಿಶ್ಲೇಷಣೆಯಿಂದ ನಿರ್ಣಯಿಸಿಕೊಳ್ಳಬಹುದು. ಪ್ರತ್ಯಕ್ಷವು= Sense Perception: ಪರೋಕ್ಷವು= Testimony And Inference: ಅಪರೋಕ್ಷವು= Knowledge by identity— ಪ್ರಮಾಣ ಶಾಸ್ತ್ರಾನುಸಾರವಾಗಿ. ಅದರಿಂದಲೇ ಬೇಂದ್ರೆ ತಮ್ಮ ಪ್ರತ್ಯಕ್ಷ ಅನುಸಾರವಾಗಿ ಹೇಳಿದರು—

"ತಿಮ್ಮನೆ ಬೊಮ್ಮನೆ ಸುಮ್ಮನೆ
ಒರಲಿದರೇನರ್ಥ ?
ವ್ಯರ್ಥವದೋ ಅದು ಅನರ್ಥ
ಅಯ್ಯಾs ಅಪಾರ್ಥ !"

ಇದು ಸಮಕಾಲೀನವಾದ ಕೆಲ ಅಕಾದಮಿ ಅನುಗೃಹೀತ ಕೃತಿಗಳಿಗೂ ಅನ್ವಯಿಸುವ ವ್ಯಾವಹಾರಿಕ ಸತ್ಯ: ದೇವನ (ಪಶುಪತಿಯು) ಸೃಷ್ಟಿಯ ದಸ್ಯುದೇಹದ ಒರಟುತನದ ವರ್ಣನೆ, ಅಸಂಸ್ಕೃತಾಭಿರುಚಿಯನ್ನು ಪ್ರೇರಿಸುವ ಕವನಾಭಾಸಗಳ ವಿಮರ್ಶೆ. ಇದು ಶಿವ ಬೇಂದ್ರೆಯ ರುದ್ರವಾಣಿ. ವರ್ತಮಾನ (Rotating) ಸಾಕ್ಷರರ ರಾಕ್ಷಸಾಪಸ್ವರದ ವಿಮರ್ಶೆ— "ಅಪಾರ್ಥ ಮಿತ್ಯ- ಪೇತಾರ್ಥಂ"— ದಂಡಿಯನ್ನು ಓದಿರಿ:—

"ಅಪಾರ್ಥಂ ವ್ಯರ್ಥಮೇಕಾರ್ಥಂ ಸಸಂಶಯಮಪಕ್ರಮಂ ।
ಶಬ್ದಹೀನಂ ಯತಿಭ್ರಷ್ಟಂ ಭಿನ್ನವೃತ್ತಂ ವಿಸಂಧಿಕಂ !
ದೇಶಕಾಲ ಕಲಾಲೋಕ ನ್ಯಾಯಾಗಮ ವಿರೋಧಿ ಚ ।"

ಎಂಬೀ ಪಂಚದಶ ನ್ಯೂನತೆಗಳು (ಆಯಾ ಭಾಷಾ ರೂಢ್ಯನುಸಾರ) "ಒರಲು ಪದ್ಯಗಳ" ಜನಕಗಳು. ಕನ್ನಡದ ಕನ್ನಡಿಯನ್ನು ಒಡೆದ ಚೂರುಗಳು. "ಎಷ್ಟುಕನ್ನಡಿಯ ಹರಳು ಬೆಸ್ತು ಕೂಡೀತೇನ ?" ಎಂದು ವರಕವಿಯೇ (ಬೇದ್ರೆಯವರೇ) ಕೇಳಿದ್ದಾರೆ. ಇದರಿಂದ ಬೇಂದ್ರೇತರ ಕೆಲ "ಕವಿಂಮನ್ಯರು" ನಮ್ರತೆಯಿಂದ ಸ್ವಕೃತಿ ಶೋಧಮಾಡಿಕೊಳ್ಳಬೇಕು. ಇದು ವರಕವಿಯ ಆದೇಶ: ಈ ಆದೇಶದ ಬೆಳಕಿನಲ್ಲಿ ಪರಾಮರ್ಶಿಸಿಕೊಳ್ಳಬೇಕು. ಆಗ ಹೊಸ ಕನ್ನಡವು, ಹೊಸ ವೇದಕಾಲವನ್ನು ಕಾಣಬಲ್ಲದು. ನಿರರ್ಥಪ್ರಾಸರಹಿತವಾದ ಸಾಲುಗಳೇ ಬೇಂದ್ರೆಯವರ ತುರುಫು. ಅವರಲ್ಲಿ "Rhyme is Reason=

ಅನುಪ್ರಾಸವು ತತ್ವಗರ್ಭಿತವಿಚಾರದ ಗುರುತ್ವವುಳ್ಳದ್ದು". ಸ್ಪಷ್ಟತೆಗಾಗಿ ಕುರುಡನಿಗೆ ಕನ್ನಡಕ ಕೊಡುವ ವಿಕೃತ ಕಾರುಣ್ಯದಿಂದ "Reason is Rhyme ಎಂದು ವಿವಿಧವಾಗಿ ಚರಿಸುವ ವಿಚಾರವನ್ನು ಪ್ರಾಸಹ್ರಾಸದ ಮೂಲಕ" ಬರೆಯುವವರಿಗೆ ಇದು ಆವರು ಕೊಟ್ಟ (ಹಾಕಿದ) ಒಂದು ಬರೆ. ಕನ್ನಡದ ವರ್ತಮಾನ ಹಾಗೂ ಭವ್ಯಮಾನವರಿತ್ತ ಗಮನಿಸಬೇಕು: "ಅನೃಷಿರ್ನಕುರುತೇ ಕದಾಪಿ ಕಾವ್ಯಂ". ಪರಿಷತ್ತು, ಅಕಾದಮಿ ಮುಂತಾದ ಸಂಸ್ಕೃತಿರಕ್ಷಕರಿಗೂ, ವಿಶ್ವವಿದ್ಯಾನಿಲಯಗಳಿಗೂ ಪೀಠಗಳಿಗೂ ಇದು ಗೊತ್ತಿರಬೇಕು. ಇಲ್ಲವಾದರೆ ಭಾರತದೇಶವು ಜಗತ್ತಿನ ರಾಷ್ಟ್ರಗಳಲ್ಲೆಲ್ಲಾ (೧೧ ನೆಯ) ಅತ್ಯಂತ ದರಿದ್ರದೇಶವಾಗಿಯೇ ಉಳಿಯುತ್ತದೆ. ಬೇಂದ್ರೆಯವರು "ಹಳೆಯ **ಹಾಳ** ಹೂಳಬೇಕು" ಎಂದರು: ಅದರ ಅರ್ಥವು ಹೊಸ **ಹಾಳನ್ನು** ಮೆರೆಯಿಸಬೇಕು ಎಂದಲ್ಲ. ಅರ್ಥನಿರ್ಭರ ಪ್ರಾಸಬದ್ಧ ಪಂಕ್ತಿಗಳು "ಛಂದಸ್". ಅದು "ಪುನಃ ಪುನರ್ ಜಾಯಮಾನಾ ಪುರಾಣೀ"= ಸಾರ್ವಕಾಲಿಕ ದ್ವಿತೀಯಾಕ್ಷರ ಪ್ರಾಸ, ಅಂತ್ಯಾಕ್ಷರ ಪ್ರಾಸಗಳಷ್ಟೇ ಪ್ರಾಸಗಳಲ್ಲ, ಅನುಪ್ರಾಸಗಳಲ್ಲ: "ವರ್ಣಾವೃತ್ತಿರನುಪ್ರಾಸಃ ಪಾದೇಷುಚ ಪದೇಷುಚಃ" " ಸನಃಪಿತೇವ ಸೂನವೇಗ್ನೇ ಸೂಪಾಯನೋಭವ" ಎಂಬ ಸಾಲಿದಕ್ಕೆ ಉದಾಹರಣೆ. ಕಲೆಯ ಸೃಷ್ಟಿಗೆ "ಸೃಷ್ಟಿಯ ಕಲೆಯಾ, ಮಾಯೆಯಬಲೆಯಾ । ಬೀಸಿದೆ ಉದಯದ ನಯನಾ" ಎಂಬುದು ಮಾದರಿ. ಸೃಷ್ಟಿಕರ್ತನು "ಕವೀನಾಂಕವಿಃ"; ಸೃಷ್ಟಿಯು "ಕಾವ್ಯಾನಾಂ ಕಾವ್ಯಂ". ಈ ಜಗದ್‌ರೂಪದ ಕಾವ್ಯದ ಪಕೃತೆ–ಅನೃತಗಳಿಗೂ ಸದಾ ಆಧಾರವಾದ ವ್ಯವಸ್ಥಾಸೂತ್ರಗಳನ್ನು ವರಕವಿಯು ಬಲ್ಲ; **ಅವರಕವಿಯರಿಯ.** ಆದುದರಿಂದ "ನಾಕು ತಂತಿಯ" ಪರಾಶರ ರೂಪಾಃ" ಎಂಬ ಪದ್ಯವು ಅಂಥ ವ್ಯವಸ್ಥೆಯ ರೂಪರೇಖೆಗಳನ್ನು ಸಂಕೇತಿಸುತ್ತದೆ. ಭಾರತೀಯನಾಟ್ಯಶಾಸ್ತ್ರಕ್ಕೆ ಭರತಮುನಿಯು ಆಧಾರ: ಹಾಗೇ ಭಾರತೀಯ ಕಾವ್ಯಸೂತ್ರಕ್ಕೆ ಛಂದೋಗಮುಕಾಚ್ಛಾದನೇ" ಯಿಂದ ಕೂಡಿದ ಉಕ್ತ ಪದ್ಯವು ಆಧಾರ= ಅದರ ಕರ್ತೃ ಆಧಾರ. "ಅರ್ಥೋಗಿರಾಮಪಿಹಿತಃ ಪಿಹಿತಃ ಸ ಏವ । ಸೌಭಾಗ್ಯಮೇತಿ ॥ ಎಂಬುದು ಆಚ್ಛಾದನೆಯ ತಾತ್ಪರ್ಯವು,

ಉಕ್ತ ಆಧಾರಕ್ಕನುಗುಣವಾಗಿಯೇ ಬೇಂದ್ರೆಯವರು "Ecstatic utterances ಮೈಮರೆಯಿಸುವ ಪದ್ಯಪಂಕ್ತಿಗಳನ್ನು" ಅಲ್ಲಲ್ಲಿ ಉದ್ಗರಿಸಿದ್ದಾರೆ.

ಶಪ್ತವನ್ನು ಶಪಿತವೆಂದು ಬರೆದದ್ದು, ಅಂಧಕಾರವನ್ನು ಅಂಧಃಕಾರವೆಂದು ಬರೆದದ್ದು, ವಿಷ್ಣುಪಾದಕ್ಕಿಂತ ಮೊದಲು ಹರನ ಜಡೆಯನ್ನು ಗಂಗಾಕರವನ್ನಾಗಿ ಬರೆದದ್ದೂ—

"ಏಕೋಹಿ ದೋಷೋ ಗುಣಸನ್ನಿಪಾತೇ
ನಿಮಜ್ಜತೀಂದೋಃ ಕಿರಣೇಷ್ವಿವಾಂಕಃ"

ಎಂಬ ಕಾಳಿದಾಸನ್ಯಾಯವನ್ನನುಸರಿಸುತ್ತ ಬಂದುದಲ್ಲದೆ. ರಾಘವಾಂಕನ "ಸಡೆ ವಡೆದವದೆ ಕುಳಿತರೆಡಯುವರೆ?" ಎಂದು ನಡೆಯುವವರೆಲ್ಲರೂ (ಯುದ್ಧದ ಕವಾಯತಿನ ವೀರಯೋಧರು ಕೂಡಾ) ಸ್ವಸಮರ್ಥನೆ ಮಾಡಿಕೊಳ್ಳಲು ಎಡೆಗೊಡುವ "ನ್ಯಾಯವನ್ನಲ್ಲ."

"ಬರುವದೇನೆ ನೆಪ್ಪಿಗೆ
ಜೀವ ಜೀವದಪ್ಪಿಗೆ"

ಎಂಬ "ಗಂಗಾವತರಣದ" ಸಾಲುಗಳಲ್ಲಿ "ಅಪ್ಪುಗೆಯ" ಬದಲು "ಅಪ್ಪಿಗೆ"ಯನ್ನು ಬಳಸಿದುದೂ ಮೇಲಿನ ಪ್ರಕರಣಕ್ಕೊಂದು ದೃಷ್ಟಾಂತ. ಆದರೆ ಪತ್ನೀ–ಪತಿ, ಸಾತ್ಮ್ಯಭಾವವನ್ನು ಆ "ಅಪ್ಪಿಗೆ" ಸೂಚಿಸುತ್ತದೆ: ಅದು ನೀರ–ಕ್ಷೀರ ನ್ಯಾಯವಲ್ಲ—

"ಕ್ಷೀರಂ ಕ್ಷೀರೇ ಸಮರಸಗತೌ ಕ್ಷೀರಮೇವಾಂಬುಮಧ್ಯೇ".

ಒಂದು ಸಮನ್ವಯವಾದರೆ ಇನ್ನೊಂದು ಸಾಮರಸ್ಯ–ಅದು ಸಾಮಶ್ರುತ್ಯಕೂ ಮುಂದಿನ ಸಾಮಗ್ರ್ಯವುಳ್ಳದ್ದು. ಈ ಶುಕಾಪ್ತಕೋಕ್ತಿಯು ತಮಗೆ ಗ್ರಾಹ್ಯವೆಂದು ಬೇಂದ್ರೆಯವರು ದೇಹತ್ಯಾಗ ಮಾಡುವುದಕ್ಕೆ ತಿಂಗಳೊಪ್ಪತ್ತಿನ ಮುಂಚೆ ನನಗೆ ಬರೆದು ತಿಳಿಸಿದ್ದಾರೆ. ಕ್ಷೀರ–ಕ್ಷೀರ ಸಾಮರಸ್ಯವು ಕ್ಷೀರ–ನೀರ ಸಮನ್ವಯಕ್ಕಿಲ್ಲ. ಪರಮಹಂಸತ್ವಕ್ಕಿದು (ಹಂಸಕ್ಷೀರನ್ಯಾಯಕ್ಕಿದು) ಪೂರ್ಣಯೋಗದ ಪೂರ್ಣಾರ್ಥವನ್ನು ಸಮಗ್ರವಾಗಿ ಕೊಡುತ್ತದೆ—It is perfectly Perfect (ಶ್ರೀ ಅರವಿಂದರೆಂದಂತೆ): ಹಾಗೇ Perfectly Infinite— "ಅಚ್ಛೇದ್ಯೋಽಯಮದಾಹ್ಯೋಽಯಂ" ಇತ್ಯಾದಿ ಗೀತಾತಾತ್ಪರ್ಯವನ್ನು ಮಥಿಸಿರಿ.

"ಈಶ್ವರ ನಿರ್ಮಿಸಿದೀ ಸೃಷ್ಟಿಯನು
ಪಾರ್ವತಿ ನೀನೇ ಸಲಹು"

ಎಂಬುದು ಅರ್ಧನಾರೀಶ್ವರ ಸಂಕೇತಿತವಾದ (ಸತ್ಯಾನೃತ ಸಂಮಿಶ್ರಣವಾದ) ಪುರುಷ–ಪ್ರಕೃತಿ ಕಲ್ಪನಾನಿಷ್ಠವಾದ ಸೃಷ್ಟಿವ್ಯಾಖ್ಯೆಯು. ಇದರಾಚೆಗಿನ ಸಚ್ಚಿದಾನಂದ (Perfectly perfect state of Consciousness)—ಅಪರಿವರ್ತನೀಯ ಖ್ಯಾತಿ. ಕಾಳಿದಾಸನು "ಕುಮಾರ ಸಂಭವದ" ೨ನೆಯ ಸರ್ಗದ ಆದಿಯಲ್ಲಿ, ಇದನ್ನೇ ದೇವತೆಗಳ ಬಾಯಿಯಿಂದ ಹೇಳಿಸಿದ್ದಾನೆ. ಶ್ರೀ ಅರವಿಂದರ ಪ್ರಕಾರ, ದ್ರಾವಿಡಮೂಲಭಾಷೆಗಳು ಸಹಾ ಆರ್ಯಭಾಷಾ-ಧಾತುಗಳಲ್ಲಿ ತಮ್ಮ ಮೂಲವನ್ನುಳ್ಳವುಗಳು (See "The Secret of the Veda). ಆದುದರಿಂದ ಬೇಂದ್ರೆಯವರಿಗೆ ಸಂಸ್ಕೃತಭೂಯಿಷ್ಠತೆಯು ಹೆದರಿಕೆ ಇಲ್ಲ: ಪಾಣಿನಿಗೂ ಹೆದರದೆ ಕನ್ನಡವೇದಸೂಕ್ತಗಳನ್ನು ಮಾದರಿಗಾಗಿ ಬರೆದರು. ವೇದವು ಧರ್ಮಮೂಲ. ವೇದವಿಲ್ಲದಲ್ಲಿ ಧರ್ಮ(ಋತ)ವಿಲ್ಲ: ಧರ್ಮವಿಲ್ಲದಲ್ಲಿ ವೇದ(ಸತ್ಯ)ವಿಲ್ಲ. "ಸತ್ಯಂತ್ವರ್ತೇನ ಪರಿಷಿಂಚಾಮಿ" ಊಟ ಮಾಡುವ ಮೊದಲು ಆರ್ಯನು ಭಾವಿಸಿಕೊಳ್ಳಬೇಕಾದ ಭಾವವಿದು. ಇದು ವೇದೋಕ್ತ. ಊಟವು ಯಜ್ಞ: ಯಜ್ಞವು ಆತ್ಮಸಮರ್ಪಣ: ಆತ್ಮವು (Delight) ರುದ್ರಾಹ್ಲಾದ (ವೇದರಸಾಸ್ವಾದನ್ನೋದಿರಿ): ಮನಸ್ಸು, ಬುದ್ಧಿ, ಪ್ರಾಣ, ದೇಹ, ಅಹಂಕಾರ ಇಂದ್ರಿಯಗಳ ಮೇಲಿನ ಅಭಿಮಾನಸ್ವರೂಪದ "ಆತ್ಮ"ವನ್ನು ತನ್ಮುಕ್ತ ಸಚ್ಚಿದಾನಂದಕ್ಕೆ ಅರ್ಪಿಸುವುದು. "ನೀ ನನ್ನ ಶಕ್ತಿ, ನಾ ಭಕ್ತಿ" ಎಂಬದ್ದು, ಬೇಂದ್ರೆಯವರ "ಆತ್ಮನಿವೇದನ". ಅಲ್ಲಿ "ಶುಕ್ತಿತೆರೆದು" ಮುಕ್ತಿಯಲ್ಲಿ ಮುಳುಗುವ ಪ್ರಜ್ಞೆಯೇ ಆತ್ಯಂತಿಕ ಸಿದ್ಧಿಯು.

ಪದಗಳ ಪರ್ಯಾಯಮಹತ್ವವು ಉತ್ತಮ ಕಾವ್ಯದ ನಿಕಷವು. ಇದಕ್ಕು ಅನೇಕ ನಿದರ್ಶನಗಳಿವೆ. ಅವುಗಳಲ್ಲಿ ಎದ್ದು ಕಾಣುವುದು "ನಾಕು ತಂತಿ"ಯ "ದೇವುಡು". ಅದೊಂದು ನಾದದ ನದಿಯಂತೆ ಹರಿಯುತ್ತದೆ. ವೇದದ ಅರ್ಥವನ್ನು ಸುರಿಯುತ್ತದೆ. "ಶ್ರೀ ವಿವೇಕಾನಂದ ಶಿಖರ–ಪ್ರಗಾಥ" ಇನ್ನೊಂದು ಮಹೋದಾಹರಣೆ. ಇದು ಪ್ರಾಕೃತ ಭಾಷೆಯಲ್ಲಿ ಅಪ್ರಾಕೃತ ಅರ್ಥವನ್ನು ಧ್ವನಿಸುತ್ತದೆ. ಇದು (Vedic symbolism) ವೈದಿಕ ಸಾಂಕೇತಿಕತೆಯ ಸುಶ್ಲಿಷ್ಟ ಮಾದರಿ— "ಓಂ ತತ್ ಸತ್".

"ಗೌರಿ ಶಂಕರ ಇತ್ತ । ಇತ್ತ ಕಾಂಚನ ಗಂಗೆ !
ಅತ್ತತ್ತ ಪರಮಹಂಸರ ಸವಾರಿ !

ಆತ್ಮಕ್ರೀಡಃ, ಆತ್ಮರತಿಃ, ಸಚ್ಚಿದಾತ್ಮವಿಹಾರಿ
ಹೆಜ್ಜೆಮೂಡದ ದಾರಿ ॥
ಅದೊ ವಿವೇಕಾನಂದ ನೀಡಿದನು ದಾರಿ, ಉದಾರಿ
ಶಿಖರದಿಂ ಶಿಖರಕ್ಕೆ ಹಾರಿ
ಈ ಹಾದಿ ಅನಾದಿ, ಹೃದಯ ಸಂವಾದಿ
ಸುನಾದಿ, ಸರಿಗಮಸನಾದಿ, ವಿಜ್ಞಾನಬೋಧಿ.
ಸಂಜ್ಞಾನ-ಸಂಬೋಧಿ".

ಈ ಉದಾಹರಣೆಯಲ್ಲಿ ಬೇಂದ್ರೆಯವರ ಕಾವ್ಯವಿವೇಕದ ಆನಂದವು ಸ್ಫುಟವಾಗಿದೆ. ಇಲ್ಲಿ ಶೈಥಿಲ್ಯ ಸ್ಪರ್ಶವಿಲ್ಲ: ಭಾವೋಚಿತ ಪದವಿನ್ಯಾಸವಿದೆ, ಹಾಗೇ ಪ್ರತೀತಿಸುಭಗತೆ ಇದೆ; ಅರ್ಥತಾತ್ಪರ್ಯವು ಲೋಕ ಪ್ರಸಿದ್ಧ. ಈ ಮಧ್ಯಮ ಬಂಧದಲ್ಲಿ (**Diction**) ವಿಷಮತೆ ಇಲ್ಲ: ನಾದ ಸಂವಾದವಿದೆ; ಅಕ್ಷರಸಾಮ್ಯಶ್ರುತ್ಯವಿದೆ. ಅದೇ ಮೇರೆಗೆ ಶಾಂತವೀರರಸ ಪ್ರೇರಕ ಮಾಧುರ್ಯವಿಲ್ಲಿದೆ: ಗ್ರಾಮ್ಯತೆಯಿಲ್ಲ. ಇನ್ನೂ ಸೂಕ್ಷ್ಮವಾಗಿ ಅವಲೋಕಿಸಿದರೆ ಪ್ರಾಸಬಲದಿಂದ ಸೌಕುಮಾರ್ಯವೂ ಇಲ್ಲಿ ಮೂಡಿದೆ: ನಿಷ್ಠುರಾಕ್ಷರ ಪ್ರಯೋಗವಿಲ್ಲ. ಅನೇಯತ್ವಲಕ್ಷಿತವಾದ ಅರ್ಥ ವ್ಯಕ್ತಿಯು ಈ ಪ್ರಗಾಥೆಯಲ್ಲಿ ಆದ್ಯಂತವು ಹಾಸುಹೊಕ್ಕಾಗಿದೆ.

"ಬಂದೆ ನಾ ಶಿವಶಕ್ತಿಯ ಹೊತ್ತು
ಈ ಹೊತ್ತು"— ಎಂಬುದು ಕೊನೆಯ ಸಾಲು.

ವಿವೇಕಾನಂದರ ವ್ಯಕ್ತಿತ್ವದ ಶಾಂತವೀರತೆ ಇಲ್ಲಿ ಸುಸ್ಪಷ್ಟವಾಗಿದೆ. ವಾಕ್ಯಾರ್ಥ ಮುಖದಿಂದ. ಗುಣವ್ಯಂಜಕತೆ ಅರ್ಥಾತ್ ವರ್ಣನೀಯ ವ್ಯಕ್ತಿಯ ಗುಣಪ್ರಶಂಸೆ ಪದ್ಯವನ್ನು ತುಂಬಿದೆ: ವಿವೇಕಾನಂದರ ಔದಾರ್ಯ, ಕಂಚುವಿನಂತಾಗಿ ಪ್ರಕಾಶಿಸುತ್ತಿದೆ. ಅವರ ವೀರಸನ್ಯಾಸಿತ್ವವು ಓಜಃಸೂಚಕ: ಅದು ಚೆನ್ನಾಗಿ ಈ ಪ್ರಗಾಥೆಯ ಪ್ರತಿಸಾಲಿನಲ್ಲೂ ಎಂಬಂತೆ ಗಮಕದ ಗತ್ತಿನಲ್ಲಿ ವ್ಯಕ್ತವಾಗಿದೆ. ವಿವೇಕಾನಂದರ ಬಗೆಗೆ ಲೋಕವು ತಿಳಿದುಕೊಂಡ ಅರ್ಥವನ್ನೆಲ್ಲೂ ಪದ್ಯವು ಮೀರಿಲ್ಲ. ಅವರನ್ನು ಶಾಂತವೀರರೆಂದು ಲೋಕ ತಿಳಿದುದನ್ನು ಕವಿ ಮಸುಳಿಸದುದರಿಂದ ಪದ್ಯದ ಕಾಂತಿಗುಣವು ಎದ್ದು ಕಾಣುತ್ತದೆ—**It is all graceful**— ಬಂಧ, ಶಯ್ಯೆ, ಪಾಕಗಳೆಲ್ಲವು ! ಲೋಕ ವ್ಯವಹಾರಕ್ಕೆ (**Common-**

sense) ಅವಿರುದ್ಧವಾಗಿ, ಭಾರತೀಯ ಆಧ್ಯಾತ್ಮ ಪರಂಪರೆಗೆ ಅನುಗುಣವಾಗಿ ಅಪ್ರಸ್ತುತ ಸಗುಣ ದೇವತಾನುಗ್ರಹಪರತೆಯನ್ನು ಪ್ರಸ್ತುತವಾದ ವಿವೇಕಾನಂದಪಾತ್ರದಲ್ಲಿ ಆರೋಪಿಸಲಾಗಿದೆ :—

"ಮಾs । ನವತೆಯ ವೈಸೇರೀ । ಪರಾಕು ।
ದೈವದ ಪಡಿಹಾರೀ ।
ಓಂ ತತ್ ಗತ್ತಿನಲಿ ನಡೆದನು ಸನ್ಯಾಸೀ
ಸ್ವಚ್ಛಂದ ಉಪನ್ಯಾಸೀ
ಸಂಗಚ್ಛಧ್ವಂ ಸಂವದಧ್ವಂ ಸಂವೋಮನಾಂಸಿ ಜಾನತ ।
ದೇವಭಾಗಂ ಯಥಾಪೂರ್ವಂ ಸಂಜಾನಾನಾ ಉಪಾಸತೇ ।
+ ಇದು "ವೃಷೋ= ಧರ್ಮಃ," ಅಧಿಯಜ್ಞ ಕರ್ಮ
ಇದು ಶಾಂತವೀರಗಾಥಾ"

ಎಂಬ ಮಾತಿನಲ್ಲಿ (ಉಪಚರಿಸಲಾಗಿದೆ) ಸಮಾಹಿತಗೊಳಿಸಲಾಗಿದೆ. ಅಧಿಯಜ್ಞತ್ವವನ್ನು ಆರೋಪಿಸಿ ರೂಪಕತ್ವಕ್ಕೆ ತರಲಾಗಿದೆ. ಮಾನವ್ಯದಲ್ಲಿ ದಿವ್ಯತ್ವವನ್ನು ಕಾಣುವ ಸಮಾಧಿಗುಣವಿದು; ಭಾರತೀಯ ಕಾವ್ಯಗುಣಗಳಿಲ್ಲಿ ಹೀಗೆ ಸಮೃದ್ಧವಾಗಿವೆ.

"ನಾನು ಬಡವಿಯು"—

"ಆತ ಕೊಟ್ಟ ವಸ್ತು ಒಡವೆ
ನನಗೆ ಅವಗೆ ಗೊತ್ತು ।
ತೋಳುಗಳಿಗೆ ತೋಳಬಂದಿ
ಕೆನ್ನೆತುಂಬ ಮುತ್ತು ॥
ಕುಂದು ಕೊರತೆ ತೋರಲಿಲ್ಲ
ಬೇಕು ಹೆಚ್ಚಿಗೇನು ?
ಹೊಟ್ಟೆಗಿತ್ತ ಜೀವಫಲವ
ತಂಟೆಗೆ ಹಾಲುಂಜೇನು ॥

ಎಂಬ ಸೊಲ್ಲುಗಳು "ಸರ್ವಂ ಶ್ಲೇಷಮಯಂ ಜಗತ್" ಎಂಬುದನ್ನು ಎತ್ತಿ ತೋರಿಸುತ್ತದೆ. ಇದು ವೈದಿಕ ಮಾರ್ಗ— ಒಗಟಿನ ಮಾರ್ಗವಲ್ಲ.

+ [illegible] ಧರ್ಮಃ = [illegible]

ಧ್ವನ್ಯಾದಿ ಸರ್ವ ಕಾವ್ಯಸಿದ್ಧಾಂತಗಳೂ ಇವರಲ್ಲಿ ಅಡಕ— ಈ ಶ್ಲೇಷ-ಸಿದ್ಧಾಂತದಲ್ಲಿ.*

"ನಾನು ಬಡವಿ ಆತ ಬಡವ
ಒಲವೆ ನಮ್ಮ ಬದುಕು
ಬಳಸಿಕೊಂಡವದನೆ ನಾವು
ಅದಕು ಇದಕು ಎದಕು"

ಎಂದು ಆರಂಭದಲ್ಲೇ ಕವಿಯು, ಒಲವಿನ ಮಾನವ್ಯಪಾವಿತ್ರ್ಯದ ಮೂಲಕ ಅದರ ದಿವ್ಯವಿಭೂತಿಯನ್ನು ಸೂಚಿಸುತ್ತಾನೆ. ಇಲ್ಲಿ ಆತ್ಮನಿವೇದನಾ ಸ್ವರೂಪದ ಭಕ್ತಿ ಎಂಬ ಅರಿವು ಅಡಗಿದೆ. ಇಲ್ಲಿ ವ್ಯವಹಾರ-ಪರಮಾರ್ಥಗಳ ಏಕಸಾರವನ್ನು ಅನುಭವಿಸಿ ತೋರಿಸಲಾಗಿದೆ. ಒಲವು ಈಗ ಸಿನೆಮಿಸಿ ತಿರುಗುವ ರಸರೋಲಂಬರಿಂದ ಸಚ್ಚಿದಾನಂದೋಪಾಸಕರವರೆಗೂ ಬೇಕು. ಒಲವಿಲ್ಲದಲ್ಲಿ—

"ದಾಸೀ ಭೃತ್ಯಃ ಸುತೋ ಬಂಧುರ್ವಸ್ತ್ರ ವಾಹನಮೇವ ಚ !
ಧನಂ ಧಾನ್ಯಮಿತೀತ್ಯಾಹುರಷ್ಟಭೋಗಾಃ ಪ್ರಕೀರ್ತಿತಾಃ ॥"

ಎಂಬ ಈ ಎಲ್ಲಾ ಭೋಗಗಳಿದ್ದರೂ ತೃಪ್ತಿ ದೊರಕದು— "ಅಸ್ತಿ-ಭಾತಿಗಳ" ಮುಂದಿನ "ಪ್ರಿಯ" ಎಂಬ ಕೊನೆಯ (ನಿರಾಕಾರ) ಬ್ರಹ್ಮಲಕ್ಷಣವಿದು. ಪ್ರಿಯತ್ವವೇ ಪ್ರೀತಿ: ಪ್ರೀತಿಯೇ ಆನಂದವೂ ಹೌದು. ಆದುದರಿಂದ ಈ ನುಡಿಗಳು ಸ್ತಂಬದಿಂದ ಬ್ರಹ್ಮದವರೆಗೂ ವ್ಯಾಪಿಸುವ ಅರ್ಥವಿಸ್ತಾರವುಳ್ಳ ಅರ್ಥವುಳ್ಳವುಗಳಾಗಿವೆ. ಇದು ಸಾರತಃ ಅರ್ಥವಾದರೆ, ಸಿನೆಮಿಸುವ ಅಪಹಾಸ್ಯಪಾತ್ರದ ಒಲವು (ಪ್ರೇಮ, ಕಾಮ) ಕೂಡಾ ಬೆಳೆದು ಹೆಮ್ಮರವಾಗಿ ಗಗನವನ್ನು ಚುಂಬಿಸೀತು— "ಏಕತ್ವಮನುಪಶ್ಯತಿ" ಆದೀತು ! A world-Government can be formed: ಕೈವಲ್ಯವು ಕರತಲಾಮಲಕವಾದೀತು. ಭಾರತದ ನೇತಾರರು ಈ ಕಣ್ಣನ್ನು ತೆರೆದರೆ, ಈ ದೇಶವು "[illegible] ಅತಿ ಕೆಳಮಟ್ಟದ ದರಿದ್ರದೇಶ" ಎಂಬ ಅಪಕೀರ್ತಿಯಿಂದ ಮುಕ್ತವಾದೀತು. ದಿವ್ಯಪ್ರೇಮವು ಸ್ವಾರ್ಥತ್ಯಾಗಯಜ್ಞ. ಸರ್ವೋದಯಸೂತ್ರ, ಸ್ವ-ಸಂತೋಷದ ಸ್ವಾವಲಂಬನ (ಅರ್ಥದಾರಿದ್ರ್ಯಗೆ ಮದ್ದು). ಅದರ ಪ್ರಕಾರವೇ

* ಸಾಗರದ (ಶಿವಮೊಗ್ಗ ಜಿಲ್ಲೆ) ಲಾಲ್‌ಬಹಾದ್ದೂರ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಗುರುರಾಜ ಕೆ. ಹೆಗಡೆ ಅವರ ಮಹಾಪ್ರಬಂಧವನ್ನೋದಿರಿ— "ಶ್ಲೇಷಸಿದ್ಧಾಂತ"

ದಿವ್ಯಜ್ಞಾನ. ಕಿರಿದರಲ್ಲಿ ಇಷ್ಟು ಹಿರಿಯರ್ಥವನ್ನು ತುಂಬಿದವನು ವರಕವಿ, ಮಹಾಕವಿ. ಋಷಿಕವಿ. ಅಧಿಯಜ್ಞಪ್ರಧಾನರಾದ ಅಂಬಿಕಾತನಯದತ್ತರ ಉತ್ತಮಪುರುಷತ್ವದ ಈ ಲಕ್ಷಣಕ್ಕೆ—

"ಯಜ್ಞೇನ ಯಜ್ಞಂ ಅಯಜಂತ ದೇವಾಃ"

ಮಾನುಷಾಹಂಕಾರಸ್ವರೂಪದ ಪಶುವಿನ ವಧದ ಯಜ್ಞ (ಪೂಜೆ, ಉಪಾಸನೆ) ಆಧಾರ. ಇದನ್ನರಿತೇ ಅವರು—

"ನಮೋ ಮಾತೆಗೇ ನಮೋ ಮಾತಿಗೇ
ನಮೋ ಜಗಜ್ಜ್ಯೋತಿಗೆ ।
ಭಾವ ಪ್ರಪಂಚಕೆ ದೇವನ ಮಂಚಕೆ
ನಮೋ ಸುಧಾಸ್ಫೂರ್ತಿಗೆ"

ಎಂದು **ನಮನದ ನ ಮನದ ಮನನವನ್ನು** ಚತುಃಸಾಗರಕ್ಕೆ ರವಿಯ ಕಿರಣಗಳು ನಮನ ಮಾಡುವ ಉದಾಹರಣೆಯಿಂದ ವಿವರಿಸಿದ್ದಾರೆ. "Every mental or Supramental act" ಎಂದರೆ ಭಾವವು. ಪ್ರಪಂಚಭಾವವೂ ಭಾವವೇ; ಭಾವಪ್ರಪಂಚವೂ ಭಾವವೇ— ಅದರ ಸಂಕೇತವಾಗಿರುವುದು ದೇವನ ಮಂಚ ಅಥವಾ ಸುಧಾಸ್ಫೂರ್ತಿ (ಅಂಬಿಕಾತನಯನ ಹಾಡು= ಬೆಳುದಿಂಗಳು= ಸುಧಾಸ್ಫೂರ್ತಿ): "ಆನಂದೋಬ್ರಹ್ಮೇತಿ ವ್ಯಜಾನಾತ್".

"ಸುತ್ತೆಲ್ಲ ಕತ್ತಲಾ ಒಳಗ ಬೆಳಗತದ ದೀಪಾ, ಬಾ ಸಮೀಪ
ಒಳಹೊರಗ ಬೆಳಕು ನಾಸಿರಲು ಯಾಕ ನಿನ ಹಣತಿ"

ಎಂಬ ಸಾಲೂ "ಸಚ್ಚಿದಾನಂದದಲ್ಲಿ" ಬಂದಿವೆ, ಇವು—

"ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ"
"ಜ್ಞಾನೇನ ತು ತದಜ್ಞಾನಂ ಯೇಷಾಂ ನಾಶಿತಮಾತ್ಮನಃ"

ಎಂಬ ಗೀತೆಯ ಒಗಟನ್ನು ಬಯಲು ಮಾಡುತ್ತವೆ. "The theory of literature" ಎಂಬ ಗ್ರಂಥದ ೧೦ನೆಯ ಅಧ್ಯಾಯದಲ್ಲಿ ಒಳ್ಳೆಯ ಪದ್ಯದಲ್ಲಿ (ಡಿ. ವಿ. ಜಿ. ಹೇಳಿದಂತೆ) ರಸಾಸ್ವಾದದ ಬಳಿಕ ಮೆಲಕು ಹಾಕಲು ತಕ್ಕ

"Great Idea" ಮಹಾಭಾವವು ಇರುತ್ತದೆ ಎಂದು ಹೇಳಲಾಗಿದೆ. "ಸರ್ವಂ ಖಲ್ವಿದಂ ಬ್ರಹ್ಮ" ಎಂಬ ಉಪನಿಷದ್ವಾಕ್ಯದೆದುರು—

"ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ
ತತ್ತ್ವಂ ಪೂಷನ್ನಪಾವೃಣು ಸತ್ಯಧರ್ಮಾಯ ದೃಷ್ಟಯೇ"

ಎಂಬ ಉಪನಿಷದ್ವಾಕ್ಯವನ್ನಿಟ್ಟರೂ ಅದೇ ಮಹಾವಿಚಾರವು ಒಗಟಾಗಿ ಕಾಣುತ್ತದೆ. "ನನ್ನ ಒಡಪ ಒಡೆದವ ಯಾವಾ?" ಎಂದು ಒಂದೆಡೆ ಬೇಂದ್ರೆಯವರೂ ಸವಾಲು ಹಾಕಿ "ನೋವೆ ನನ್ನ ಜೀವ" ಎಂದು ಮುಂಬರಿಸಿದ್ದಾರೆ. ಈ ನೋವು ಸಾಧಕನ ನೋವು— ಅವನೊಬ್ಬ ಜೀವನಾದುದರಿಂದ. ಪ್ರಾರ್ಥನೀಯನಾದ ಪೂಷನ್ ಅಥವಾ ಶ್ರೀಕೃಷ್ಣ ಮತ್ತು ಪ್ರಾರ್ಥಿಸುವ ಮಾನವಾತ್ಮ ಇವು ಇರುವವರೆಗೆ ಭಕ್ತ–ದೇವರ ವಿಭಕ್ತತೆ (ವಿಭಕ್ತಿ) ಇರುತ್ತದೆ. ಆತ್ಮನಿವೇದನಸ್ವರೂಪದ ನವವಿಧದ ಭಕ್ತಿಪದವು ತನ್ನ ಯೌಗಿಕ ಅರ್ಥವನ್ನು ಬಿಟ್ಟು ರೂಢ್ಯರ್ಥಾನುಸಾರ "ಮುಕ್ತಕಂಠದಲ್ಲಿ" ರಮಣರನ್ನು ಕುರಿತು ಹೇಳಿದಂತೆ— ಮಾನವಾಹಂಕಾರವನ್ನು ದೇವನು ನುಂಗುವಂತೆ ಮಾಡಿ ಮಾನವನ ಆತ್ಮವು ದೇವಾತ್ಮದಲ್ಲಿ ಖಾಯಂ ಲೀನವಾಗುವಂತೆ (ಶೂನ್ಯವಾಗುವಂತೆ ಅಲ್ಲ) ಪ್ರಜ್ಞಾವಿಕಾಸವಾಗುವ ಅರ್ಥವೇ ಇಲ್ಲದಗಿದ ಮಹಾಭಾವ. ಮಹಾವಿಚಾರ, ಮಹಾಕಲ್ಪನೆ, ಈಶ್ವರೇಚ್ಛೆ. ಇದೇ ಒಡಪಿನ ಉತ್ತರ. ಆವರಣ–ಅಪಾವರಣಗಳ ಕ್ರಿಯೆಯು ಜ್ಞಾನಕ್ರಿಯೆ. ಅದಕ್ಕೆ ವಿವರಣೆಯಾಗಿ ಬಂದ, ನಿದರ್ಶನವಾಗಿ ಬಂದ—

"ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ
ಅಹಂತ್ವಾಂ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ"

ಎಂಬ ಕೃಷ್ಣಾಶ್ವಾಸನವು ಭಾರತೀಯ ತತ್ತ್ವಜ್ಞಾನದ ಗೌರೀಶಂಕರ. ಸೂರ್ಯನು ಕತ್ತಲನ್ನೋಡಿಸಬಲ್ಲ ಮತ್ತು ನಮಗೆ ಕತ್ತಲನ್ನು ತೋರಿಸಲೂ ಬಲ್ಲ. ಈ ಕತ್ತಲಲ್ಲಿ ಅಲ್ಪಕರ್ತೃತ್ವದ ಜೀವತ್ವವಿದೆ; ಬೆಳಕಿನಲ್ಲಿ ಮಹಾಕರ್ತೃತ್ವದ ದೇವತ್ವವಿದೆ. ಲೌಕಿಕವಾದ ಕತ್ತಲು-ಬೆಳಕುಗಳೆರಡಕ್ಕೂ ಸೂರ್ಯನೇ ಆಧಾರ. ಅವನೇ ಸರ್ವ ಸವಿತಾರ, ಸೃಷ್ಟಿಕರ್ತ ಅರ್ಥಾತ್ ಜೀವಿಯ ಹಾಗೂ ಅವನ ಬಂಧಭಾವದ ಮೂಲ: ಅವನೇ ಆ ಭಾವದಿಂದ ಜೀವಿಯನ್ನು ಅವನ ಬಂಧ-

ಭಾವವನ್ನೂ ಪರಿಹರಿಸಬಲ್ಲ ದಿವ್ಯಪ್ರಣೋದ— ಎಂದು ವೈದಿಕ ರೀತಿಯಿಂದ ಹೇಳಬಹುದು. ಅವನೇ ಬೇಡುವ ಸ್ವಾತಂತ್ರ್ಯವನ್ನು ಜೀವಿಗೆ ನೀಡಿದವನು, "ನನ್ನನ್ನು ತಿನ್ನೆಂಬುದೇ" ಮಹಾಪ್ರಾರ್ಥನೆ: "ಅಹಮನ್ನಂ ಅಹಮನ್ನಂ .. ಅಹಮನ್ನಾದಃ". ಬೆಳಕಿನ ವಿಶ್ವವ್ಯಾಪಕತೆಗೆ ಯಾವಾಗಲೂ ಕುಂದಿಲ್ಲದಂತಿರು-ವಾಗಲೇ ಕತ್ತಲು ತೋರಿಯಡಗುವುದು ದೇವಲೀಲೆ. ಆ ದೇವನು ಸಚ್ಚಿದಾನಂದ: ಆ ಲೀಲೆ ಅತರ್ಕ್ಯ— "ನೈಷಾ ತರ್ಕೇಣ ಮತಿರಾಪನೇಯಾ"– Supra- Rational. ಆದುದರಿಂದ ದೇವರು Omnipresent, Omni-Scient ಮತ್ತು Omnipotent ಆಗಿರುವುದರ ಜೊತೆಗೇ Omnivorous ("ಕಾಲೋಽಸ್ಮಿ ಲೋಕಕ್ಷಯಕೃತ್ ಪ್ರವೃದ್ಧಃ" ಎಂಬ ಗೀತೋಕ್ತಿಯಂತೆ **ಸರ್ವಭಕ್ಷಕ** ಅರ್ಥಾತ್ ಸರ್ವ ಅಜ್ಞಾನಗಳ ಭಕ್ಷಕ, ಲಯಕಾರಕ ಮತ್ತು ಮೋಕ್ಷಕಾರಕ. ಅಜ್ಞಾನದ ದೇಶಕಾಲಾದ್ಯವಚ್ಛಿನ್ನ ಸೃಷ್ಟಿಕರ್ತನಾದ ಸವಿತೃ (ಸಚ್ಚಿದಾನಂದ) ತನ್ನ ಮಗುವನ್ನೇ ತಾನು ತಿನ್ನುವಂತೆ ಯತ್ನಿಸುವುದೇ ಅಹಂಕಾರಾವಚ್ಛಿನ್ನತೆಯಿಂದ ಜೀವಗಳಾದ ದಾನವ ಮಾನವ ದೇವಾವತಾರ-ಗಳು ಕೊನೆಯಲ್ಲಿ ಬಯಸುವ ಸತ್ಯಧರ್ಮದ ನಿತ್ಯದರ್ಶನವು ಅಥವಾ ಬ್ರಹ್ಮಾನಂದಸಾಮರಸ್ಯಪ್ರಜ್ಞೆಯು. ಇದು ಹಿಮಾಲಯೋಪಮಭಾವ (ವಿಚಾರ), ಮೇರುತ್ತುಂಗ ಕಲ್ಪನೆ, ಸುಮೇರು ಸದೃಶಾನುಭವದ ವಾಙ್ಮಯ ಸಂಕೇತವು. ಬೇಂದ್ರೆಯವರ ಪುರುಷೋತ್ತಮನು, ಮೇಲೆ ಹೇಳಿದ್ದು ಅವನ ಪ್ರಕೃತ್ಯುತ್ತಮೆಗೆ— ಅರ್ಥಾತ್ ಪ್ರಾಕೃತರಾದ ಸಾಧಕರಿಗೆ. "ಪ್ರೀತಿ **ಯೊ** ಭಕ್ತಿ ಎಂಬುದು ಬೆಂಕಿ (ಸೂರ್ಯ): ಜೀವನು ಕಪ್ಪುರದಗೊಂಬೆ" ಎಂದು ಮತ್ತೊಂದು ಸಾಲು ಪುರುಷನ ಬಾಯಿಯಿಂದ ಅದೇ ಪದ್ಯದಲ್ಲಿ ಬಂದಿರುವುದು ಈ ತಾತ್ಪರ್ಯದ ಸಮರ್ಥನೆ ("ತಮಸೋ ಮಾ ಜ್ಯೋತಿರ್ಗಮಯ" ಎಂಬ ಮಹಾ ಪ್ರಾರ್ಥನಾಯಜ್ಞದ ಮೂಲವೂ ಇಲ್ಲೇ ಇದೆ).

ಮೇಲಿನ ವಿವರಣೆಯನ್ನು ಬೇಂದ್ರೆಯವರ ಆತ್ಮ, ಪರಮಾತ್ಮ, ಅಂತ-ರಾತ್ಮಗಳ ಐಕ್ಯವನ್ನು ಸೂಚಿಸುವ "ಚೈತನ್ಯದ ಪೂಜೆ" ("ನಾಲ್ಕು ತಂತಿಯಲ್ಲಿ") ದೃಢೀಕರಿಸುತ್ತದೆ :

> "ಚೈತನ್ಯದ ಪೂಜೆ ನಡೆದಽದ
> ನೋಡಽ ತಂಗಿ । ಅಭಂಗದ ಭಂಗೀ ॥

ಸೌಜನ್ಯ ಎಂಬುದು ಮೊದಲನೆ ಹೂವು
ಅರಳಿಸೋಣ ನಾವೂ ನೀವೂ
ಸಾಮರ್ಥ್ಯ ಎಂಬುದು ಬೆಲಪತ್ರಿ
ಶಿವಗರ್ಪಿತವಿರಲಿ ಖಾತ್ರಿ.
ಸತ್ಯ ಎಂಬುವ ನಿತ್ಯದ ದೀಪ
ಸುತ್ತೆಲ್ಲಾ ಅವನದೆ ರೂಪ
ಪ್ರೀತಿ ಎಂಬುವ ನೈವೇದ್ಯ
ಇದು ಎಲ್ಲರ ಹೃದಯ ಸಂವೇದ್ಯ.
ಸೌಂದರ್ಯ ಧ್ಯಾನಾ ಎದೆಯಲ್ಲಿ
ಅಸ್ಪರ್ಶಾ ಚಿನ್ಮಯದಲ್ಲಿ
ಆನಂದಗೀತಾ ಸಾಮವೇದಾ
ಸರಿಗಮ ನಾದಾ.
'ಉದ್ಭವ' 'ಉದ್ಭವ' ಹೇ ಮಂಗಲಮೂರ್ತಿ
ಅಲಲಾ, ಅಹಹಾ, ಅಮಮಾ
ಆತ್ಮಾ ಪರಮಾತ್ಮಾ ಅಂತರಾತ್ಮಾ
ಘನವೋ ಘನವೋ ನಿಮ್ಮ ಮಹಿಮಾ"

ಚೈತನ್ಯವೊಂದು=ಚಿತ್=ಸಚ್ಚಿತ್=ಸಚ್ಚಿದಾನಂದ. ಅದು ಮೂರ್ತ-ಸ್ವರೂಪ ತಾಳಿದಾಗ ಆತ್ಮ, ಪರಮಾತ್ಮ, ಅಂತರಾತ್ಮ ಇತ್ಯಾದಿ "ಏಕೋಹಂ ಬಹುಸ್ಯಾಂ" ಆಗುತ್ತದೆ; (Beingವು Becomings ಆಗುತ್ತವೆ. ಈ "ಬಿಕಮಿಂಗ್" ಎಂಬಿವುಗಳು ಆದ್ಯಂತವುಳ್ಳವುಗಳು—ಎಲ್ಲ ತರತಮ ಪದಾರ್ಥ-ಗಳ "ಗ್ರೇಡು"ಗಳು. "ಹೈಯರ್" ಮತ್ತು "ಲೋಯರ್" ಪ್ರಜ್ಞಾಸ್ತರಗಳನ್ನುಳ್ಳವುಗಳು. ಗುರು ಅರವಿಂದರ ಈ ವಿಚಾರವು ಬೇಂದ್ರೆಯವರ ಪದ್ಯಗಳ ಹಿನ್ನೆಲೆಯಲ್ಲಿ ಇದ್ದೇ ಇರುತ್ತದೆ. "ಆಗುವವುಗಳು" ಒಂದು ದೃಷ್ಟಿಯಿಂದ ಅಜ್ಞಾನದ ಕತ್ತಲೆಯ ಹಂತಗಳು: "ಇರುವುದು" ತಾರತಮ್ಯವಿಲ್ಲದ ಅವಿಕಾರದ, ಅಸೀಮದ, ಅತ್ಯಧಿಕ ಅಧಿಕಾರವುಳ್ಳ ಜ್ಞಾನದ ಬೆಳಕು. ತೇಜಸ್ಸಿನ ಅಭಾವವು ತಮಸ್ಸು—ತಮಸ್ಸೊಂದು ಪ್ರತ್ಯೇಕ ದ್ರವ್ಯವಲ್ಲ ಎನ್ನುತ್ತದೆ ನ್ಯಾಯವೈಶೇಷಿಕದರ್ಶನವು. ಆದರೆ ಅರವಿಂದ ಗುರುಗಳ ಪ್ರಕಾರ

ಅನಿತ್ಯ—ನಿತ್ಯ **ಸತ್ಯ**ಗಳಿವು: ಮಾಯಾಕೃತಿಗಳಲ್ಲ— ಜ್ಞಾನಕ್ಕೆ ಅಡ್ಡಬರುವ ಬರಿ Veils ಮುಸುಕುಗಳು— ಅವೂ ಬಹಳ ಕೆಳಗಿನ ಮಟ್ಟಗಳಲ್ಲಿ ("Life Divine" ಗ್ರಂಥವನ್ನು ನೋಡಿರಿ). ಮಾನಸ ಮತ್ತು ಅದರ ಕೆಳಗಿನ ಹಂತಗಳ ಪ್ರಜ್ಞೆಗಳು ಅಧಃಪ್ರಜ್ಞೆಗಳು: ಮಾನಸೋತ್ತರವಾದ ವಿಜ್ಞಾನಾದಿ ಪ್ರಜ್ಞೆಗಳು ಊರ್ಧ್ವಪ್ರಜ್ಞೆಗಳು, ದೇವತೆಗಳು, ಸಾಧಕ ಸಹಾಯಕಗಳಾಗಿ-ಸಿದ್ಧಿಮಂಥವುಗಳು. ಸಾಧಕನು ಮಾನಸಪ್ರಜ್ಞಾಸ್ತರದಲ್ಲಿರುವ ಮಧ್ಯಮ (Man is a mental being). ಅಧಿಯಜ್ಞ ಪ್ರಜ್ಞೆಯುಳ್ಳ ಅವತಾರ ಗಳೆಲ್ಲಾ ಊರ್ಧ್ವಸ್ತರಗಳವು—ಅಧ್ಯಾತ್ಮಸಿದ್ಧಿಗೆ ಪೋಷಕಗಳು. ದಿವ್ಯಶಕ್ತಿಗಳು ಅಧಿದೈವಗಳು. ದಿವ್ಯಜೀವನವು ಇಲ್ಲಿಂದ ಆರಂಭವಾಗಿ ಸಚ್ಚಿದಾನಂದ-ಸ್ತರದಲ್ಲಿ ಕೊನೆಗೊಳ್ಳುವುದು. ಅದು ಉತ್ತಮ ಮಾನವನ ಉನ್ನತ ಗುರಿ. ಅಧಮಸ್ತರಗಳ ಒಳಗೂ ಸಚ್ಚಿದಾನಂದವು ಅಂತರ್ಯಾಮಿ, ಉತ್ತರ ದಿಕ್ ಪ್ರೇರಕ. ಅದು Supreme will ಸರ್ವಾಧಿಕ ಸಾಮರ್ಥ್ಯವುಳ್ಳ ಸಂಕಲ್ಪಶಕ್ತಿ, ಇಚ್ಛಾಶಕ್ತಿ. ಸೌಂದರ್ಯವು ಆನಂದದಲ್ಲಿ ಅಂತರ್ಗತ. ಸತ್ಯವು ಸತ್ತಿನಲ್ಲಿ ಅಂತ ರ್ಗತ: ಜ್ಞಾನವು ಚಿತ್ತಿನಲ್ಲಿ ಅಂತರ್ಗತ. ಈ ವಿಚಾರಧಾರೆಯು ಬೇಂದ್ರೆ ಯವರ ಪದ್ಯಗಳ ಕಪಾಟಿನ ಬೀಗದ ಕೈ. "ಬಿಕಮಿಂಗ್ಸಿನ" ಜೀವಿಗಳ ಆಯು ರ್ದಾಯ (ಕಾಲಮಾನ) ವಿವಿಧ— ನಿಮಿಷದಿಂದ ಪರಾರ್ಧ ಸಂಖ್ಯೆಯ ವರ್ಷ ಗಳ ವರೆಗೆ. ಅನಂತರ Time-space-consciousness ಇಲ್ಲದ ಆತ್ಮರತ ಸಚ್ಚಿದಾನಂದ. ಕತ್ತಲಿನ (ಅಜ್ಞಾನದ) ಪರಾಕಾಷ್ಠೆಯು Inconscience. ಅದು ವೃತ್ರ, ದಸ್ಯು, ಪಣಿ, ಅಹಿ ಮುಂತಾದ ಸಾಧಕಶತ್ರುಗಳು Dark Forces. ದೈವೀ ಶಕ್ತಿಗಳ ಆರಾಧನೆಯಿಂದ, ಅವುಗಳ ನೆರವಿನಿಂದ, ಆಸುರೀ-ಶಕ್ತಿಗಳನ್ನು ಜಯಿಸಿ ಮಾನಸೋತ್ತರ (ಅತಿ ಮಾನಸ) ಪ್ರಜ್ಞಾಸ್ತರಗಳಾವುದ ರಲ್ಲಾದರೂ ಸಾಧಕ ಯೋಗಿ ನೆಲೆಸಬಹುದು. ಈ ಉದಾರ ಧೋರಣೆಯ ಮೂಲಕ. ಶ್ರೀ ಅರವಿಂದರು ತ್ರಿಮತಸ್ಥರ ಪರಸ್ಪರ ಖಂಡನ-ಮಂಡನಗಳಿಗೆ ಇತಿಶ್ರೀ ಹಾಕಿದರು. ಬೇಂದ್ರೆಯವರು ಅದರಿಂದಲೇ ಮಧ್ವ ಸ್ತುತಿಯನ್ನೂ ಮಾಡಿದ್ದಾರೆ. ಈ ಪ್ರಕಾರ ಭಾರತೀಯ ಧರ್ಮ ಸಮನ್ವಯ ಮಾಡಿದ ಕವಿತ್ವದಿಂದಲೇ. ರಸರತ್ನಾಕರದಿಂದಲೇ, ಸೌಂದರ್ಯ ಸುಕೃತದಿಂದಲೇ ಕನ್ನಡ ಕವಿಗಳು ೨೦ ನೆಯ ಶತಮಾನವನ್ನು ಅನನ್ಯವಾಗಿ ಬೆಳಗಿದರು — ಅಪರಾಜಿತ

ರಾಗಿ ಹೇಳಿದರು. ಸುಪ್ರುಕೃತಂ ಸುಕೃತಂ. "ರಸೋ ವೈ ಸಃ । ರಸ ಏವಾಯಂ ಲಬ್ಧ್ವಾ ಆನಂದೀ ಭವತಿ." ಅವರು ನಂದಿ. ಆನಂದಿ. ಸಮಸ್ವಯಂ ಸ್ವಾಂದಿ. *"ಶ್ರದ್ಧಾಮಯೋಽಯಂ ಪುರುಷಃ": "ಯೋ ಯಚ್ಛ್ರದ್ಧಃ ಸ ಏವ ಸಃ". A man becomes what he believes ಮತ್ತು what he desires he believes. ಈ ಮಾನಸಶಾಸ್ತ್ರ ಸೂತ್ರಗಳಿಗೆ ಅಪವಾದಗಳಿಲ್ಲ. "ದೃಷ್ಟಿಯಂತೆ ಸೃಷ್ಟಿ" ಎಂಬ ಮಾತಿಗಿವು ಆಧಾರಗಳು. ಅವನು ಮಾಡಿಕೊಂಡ ಸೃಷ್ಟ್ಯರ್ಥ ಅವನದು, ಇವನು ಮಾಡಿಕೊಂಡ ಸೃಷ್ಟ್ಯರ್ಥ ಇವನದು ! ಅವನ ಹಾಗೂ ಇವನ ಅರ್ಥ ಒಂದೇ ಆದರೆ ಸಂತೋಷ, ಆಗದಿದ್ದರೆ ಅಸಂತೋಷ ಪಡಬೇಕಾಗಿಲ್ಲ. ಅವನೂ ಇದ್ದಾನೆ, ಇವನೂ ಇದ್ದಾನೆ: ಇರುವುದು ಇಲ್ಲವಾಗದು. ಇಲ್ಲದುದು ಇರದು, "ಸತ್" ಸಾಧಾರಣ ಧರ್ಮವು. "Nothing is lost when a candle burns". ಸತ್=ಸತ್ಯ=ಇರುವುದು=ಇರುವಿಕೆ.

"ಸತ್ಯೇನ ವಿಧೃತೋ ಲೋಕಃ
ಸರ್ವಂ ಸತ್ಯೇ ಪ್ರತಿಷ್ಠಿತಂ" ಎನ್ನುತ್ತಾನೆ ವ್ಯಾಸನು.

ಬೇಂದ್ರೆಯವರ ಕೃತಿಗಳಲ್ಲಿ ಪ್ರವಾದಿತ್ವವು ಎದ್ದು ಕಾಣುತ್ತದೆ.
"ಹೊಸ ಸೃಷ್ಟಿ ಬರುವದಿದೆ ಇನ್ನು ಮುಂದೆ

ಆಗೋಣ ಆ ಜಗದ ತಾಯಿತಂದೆ" ಎಂದು ಅವರೇ ಅದನ್ನು ವ್ಯಕ್ತಪಡಿಸಿದ್ದಾರೆ. "ನವೋ ನವೋ ಭವತಿ ಜಾಯಮಾನಃ". ಟೀ. ಎಸ್. ಎಲಿಯಟ್ಟನು ವರ್ತಮಾನ ಭವಿಷ್ಯತ್ತುಗಳಲ್ಲಿ ಅತ್ಮರೂಪದಲ್ಲಿ ಭೂತಕಾಲೀನ ಸಂಸ್ಕಾರ ಹರಿಯುತ್ತಿರುವ ಅಂಶವನ್ನು ವಿವರಿಸಿದ್ದನ್ನು ಬೇಂದ್ರೆಯವರು ಬಲ್ಲರು. ಆದುದರಿಂದ ಪರಂಪರಾ ವಿಕಾಸವು ಸ್ವಾಭಾವಿಕವೆನ್ನುವವರವರು. ವಿಕಾಸವಿಲ್ಲದಲ್ಲಿ Stagnation ಯಥಾಸ್ಥಿತಿಯು ನಾರುತ್ತದೆ. ಆದರೆ ವಿಕಾಸವು ವಿರೋಧವೋ ವಿಕಾರವೋ ಆದಾಗ ಧರ್ಮಗ್ಲಾನಿಯುಂಟಾಗುತ್ತದೆ. "ಸತ್ಯಂ ವದ" ಎಂಬುದರ ಮುಂದೆಯೇ "ಧರ್ಮಂಚರ" ಎಂಬ ಮಾತು ಬಂದಿರುವುದಕ್ಕೆ

* "ಕಾಮಸ್ತದಗ್ರೇ ಸಮವರ್ತತಾಧಿ । ಮನಸೋ ರೇತಃ ಪ್ರಥಮಂ ಯದಾಸೀತ್ ॥" ಎಂಬ ಋಗ್ವೇದೋಕ್ತಿಯು "ಶ್ರದ್ಧಾಮಯೋಽಯಂ ಪುರುಷಃ" ಎಂಬ ಮಾತಿಗೆ ಇದನ್ನು ಪರ್ಯಾಯವಾಗಿ ಕೊಡಲು ಆಧಾರವಾಗಿದೆ.

ಬಹಳ ಮುಖ್ಯವಿದೆ. ಇದನ್ನರಿಯದ ಜಗತ್ತಿಂದು ವಿನಾಶೋನ್ಮುಖವಾಗು-ತ್ತಿದೆ. ಸುಮನಸ್ಸಿನ ಸುನೇತೃವಿನ ಬರವನ್ನು ಹಾರಯಿಸುತ್ತಿದೆ: ಅಂಥ ನೇತೃವೇ Superman ಅವತಾರಿ. ಅಸಾಧಾರಣ ಸಮರ್ಥನು. ಸಾಧಾರಣೆಯು ಮಾತಾಡುವವರಿದನ್ನು ಗುರುತಿಸಬೇಕು. ಹಾಗೇ "ಯದ್ಯದಾಚರತಿ ಶ್ರೇಷ್ಠಸ್ತತ್ತ ದೇವೇತರೋಜನಃ" ಎಂಬ ಸತ್ಯವನ್ನು ಮರೆತು Admire and do otherwise ಎಂಬ ಆಷಾಢಭೂತಿತನವನ್ನು ಅಧುನಿಕತೆ. ವ್ಯಕ್ತಿಸ್ವಾತಂತ್ರ್ಯ ಎಂದು ತಿಳಿದು ಮೋಸಹೋಗಬಾರದು. ಮಾನವನ ಸರ್ವ ಕಾರ್ಯಕ್ಷೇತ್ರಗಳಲ್ಲೂ ಈ ತಿಳಿವಳಿಕೆ ಅಚ್ಯುತವಾಗಿರಬೇಕು. ಇದಕ್ಕೆ ಚ್ಯುತಿ ತರುವವರು ಜಗನ್ನಿಂದ್ಯರು. ಭಾರತದ ರಾಷ್ಟ್ರತ್ವದ ಬುನಾದಿಯನ್ನು ಸಡಿಲುಗೊಳಿಸುತ್ತಿರುವವರು. ಅವರ ಪಾಪವು ಸರ್ವ ಭ್ರಷ್ಟಾಚಾರಗಳಿಗೆ ಸರ್ವತ್ರ ಮೂಲಕಾರ-ಣವು. ಜೀವನದಲ್ಲಿ ಕಾವ್ಯವಿಮರ್ಶೆ ಇರುವಂತೆ ಕಾವ್ಯದಲ್ಲಿ ಬೇಂದ್ರೆಯವರು ಜೀವನವಿಮರ್ಶೆಯನ್ನು ಮಾಡಿದ್ದಾರೆ. ಈ ವೈಶಿಷ್ಟ್ಯವು ಗಮನಾರ್ಹವು.

"ಸಾಹಿತ್ಯವಿಮರ್ಶೆಯಲ್ಲಿ" "ಹೊರಗಣ್ಣಿಗೆ ಕಾಣುವ ಸೃಷ್ಟಿಯು ಮೂಕವಾಗಿದೆ: ಒಳಗಣ್ಣ ಇದಿರು ಕುಣಿದಾಡುವ ಕನಸು ವಿಕ್ಷಿಪ್ತ ದೃಷ್ಟಿಯಂತೆ ತೋರುವುದು: ಹೊಳೆಗಣ್ಣಿಗೆ ನಮ್ಮ ಸ್ವಂತದ ಕರ್ಮಜಾಲವೆಲ್ಲಾ ದೈವ ಲೀಲೆಯಾಗಿ ತೋರಿ ನಮ್ಮ ಎಚ್ಚರಿಕೆಯೂ ಗಾಢ ನಿದ್ರೆಯಂತೆ ಭಾಸವಾಗುವುದು; ತಿಳಿಗಣ್ಣಿಗೆ ಎಲ್ಲ ಜೀವನವೂ ರಸಮಯವಾದ ನಾಟಕವಾಗಿ ಅನುಭವಕ್ಕೆ ಬರುವುದು ("ತ್ರೈಗುಣ್ಯೋದ್ಭವಮತ್ರಲೋಕಚರಿತಂ ನಾನಾರಸಂ ದೃಶ್ಯತೇ"). ಈ ಚತುರ್ಮುಖವಾದ ಪ್ರಜ್ಞೆಯು ಎಲ್ಲರಿಗೂ ಇದೆ. ವಿವೇಚಿಸಿ ನೋಡಿದಾಗ ಎಂಥ ಮೂಢನಿಗೂ ಇದು ಹೊಳೆಯದೆ ಹೋಗುವುದಿಲ್ಲ. "ಬರಿ ಹೊಳೆದು ಫಲವಿಲ್ಲ. ಮೊಳೆಯಾಗಿ ಹೊಮ್ಮಬೇಕು." ಇಂದಿನ ಸಾಹಿತ್ಯವು (ಅವರ ಸಾಹಿತ್ಯದಂಥ ಸಾಹಿತ್ಯವು) ಈ ಹಂಚಿಕೆಯಲ್ಲಿದೆ: ಅನ್ಯ ಸಾಹಿತ್ಯಪದ್ಧತಿಗಳಲ್ಲಿ ಈ ಹಂಚಿಕೆಗೆ ಎಡೆ ಕಡಿಮೆ. "ಕವಯಃ ಕಾಳಿದಾಸಾದ್ಯಾಃ ಕವಯೋವಯಮಪ್ಯಮೀ" ಎಂಬ ಕೇವಲ ಸಾಕ್ಷರರಲ್ಲಿ ಹಬ್ಬುತ್ತಿರುವುದೇ ಕಾರಣವು · ಅಪ್ರಸಸ್ತಕ್ಕೆ ಪ್ರಶಸ್ತಿ ದೊರಕುತ್ತಿರುವ ಸಂದರ್ಭಗಳು ತತ್ಫಲವಾಗಿವೆ.

ಕಾಳಿದಾಸನು "ಪೂಜ್ಯಪೂಜಾವ್ಯತಿಕ್ರಮದ" ಫಲವನ್ನು ಸಾಂಕೇತಿಕವಾಗಿ ರಘುವಂಶದಲ್ಲಿ ಈ ರಾಷ್ಟ್ರಕ್ಕೆ ಹೇಳಿದ್ದಾನೆ. ಪೂಜ್ಯರ ತಿರಸ್ಕಾರವು ನಾಗರಿಕತೆ ಸಂಸ್ಕೃತಿಗಳನ್ನು ಬಂಜೆಗೊಳಿಸುವುದು— ಅಥವಾ ಅಜಾತ. ಮೃತ, ಮೂರ್ಛಿತ-ಶಿಶುಗಳ ಜನನಕ್ಕೆ ಕಾರಣವಾಗುವುದು. ಬೇಂದ್ರೆಯವರು ಪೂಜ್ಯತ್ವ ಶೋಧಮಾರ್ಗವನ್ನು ಹೀಗೆ ಹೇಳಿದ್ದಾರೆ— "ಏನೇ ಇರಲಿ. ಬಡತನವು ಸಾಮೂಹಿಕ ಪಾಪವೆಂಬ ತಿಳುವಳಿಕೆಯು ಬೇರೂರಿ ಬೆಳೆದು ಬಲಿತು: ಇಂದು ಬೇರುಸಹಿತ ಕಿತ್ತೊಗೆಯಲು (ಕೆಲವುಜನ ಪೂಜ್ಯ ನೇತೃಗಳು) ನಿಂತಿದ್ದಾರೆ: ಈ ತಿಳಿವಳಿಕೆಗೆ ಸಮಾಜಸತ್ತಾವಾದ, ರಾಷ್ಟ್ರವಾದ, ಸ್ವಾತಂತ್ರ್ಯವಾದ ಇತ್ಯಾದಿ ಹೆಸರು. ರೂಪವಂತೆ ನಾಮ— ಬೇಡವಾದದ್ದು ಬೇತಾಳವೆಂಬಂತೆ ಒಮ್ಮೊಮ್ಮೆ ಅದಕ್ಕೆ "ಬೊಲ್ಶೆವಿಜಂ" ಎಂದೂ ಎನ್ನುವರು. ರೂಪವೇನೇ ಇರಲಿ, ಅದರ ನಾಮವೇನೇ ಇರಲಿ, ಬಡತನವನ್ನು ಭೂಮಿಯಿಂದ ಕಿತ್ತೊಗೆಯುವುದು— ಇನ್ನೊಮ್ಮೆ ಮೊಳೆಯದಂತೆ ಕಿತ್ತೊಗೆಯುವುದು— ಅದರ ಸ್ವರೂಪ. ಇದೊಂದು ರುದ್ರಲೀಲೆ" ಏಕೆ ?

> "ದಾರಿದ್ರ್ಯಾದ್ ಹ್ರಿಯಮೇತಿ ಹ್ರೀಪರಿಗತಃ ಪ್ರಭ್ರಶ್ಯತೇ ತೇಜಸಃ
> ನಿಸ್ತೇಜಾಃ ಪರಿಭೂಯತೇ ಪರಿಭವಾನ್ನಿರ್ವೇದಮಾಪದ್ಯತೇ ।
> ನಿರ್ವಿಣ್ಣಃ ಶುಚಮೇತಿ ಶೋಕಪಿಹಿತೋ ಬುದ್ಧ್ಯಾ ಪರಿತ್ಯಜ್ಯತೇ
> ನಿರ್ಬುದ್ಧಿಃ ಕ್ಷಯಮೇತಿ ಭೋ ನಿಧನತಾ ಸರ್ವಾಪದಾಮಾಸ್ಪದಂ॥"

ಎಂದು ಮೃಚ್ಛಕಟಿಕೆಯ ಚಾರುದತ್ತ ಹೇಳಿದ್ದಾನೆ. "ಆದುದರಿಂದಲೇ ಅದು (ಬಡತನ ನಿರ್ಮೂಲನವು) ಸಾಹಿತ್ಯದ ಸಾರ್ವಭೌಮ ವಸ್ತು" ಎಂದಿದ್ದಾರೆ ಬೇಂದ್ರೆ. ಇದು ಅವರ ಪ್ರವಾದವು. ಇವನ್ನಾವ ಮಾನವತಾವಾದಿ ಅಲ್ಲಗಳೆದಾನು ? ಅದರಲ್ಲೂ ಭಾರತವು ಕೇವಲ ಮಾನವತಾವಾದಿಯಲ್ಲ. "ಸರ್ವೇಭ್ಯೋ ಭೂತೇಭ್ಯಸ್ಸ್ವಸ್ತಿರಸ್ತು" ಎಂಬ ಚರಾಚರ ಕುಟುಂಬ ಯೋಗಕ್ಷೇಮವಾದಿ. ಅದರಿಂದಲೇ ಬೇಂದ್ರೆಯವರು.

> "ಅರಿವು ಎಂಬುದು ಬಾಳುವೆ ಅಲ್ಲ,
> ಅಶಕ್ತವೆಂಬುದು ಬದುಕಲ್ಲ:
> "ನಾ" "ನಾ" ಎನ್ನುತ ನಾನಾ ತೆರದಲಿ
> ವಿಭಕ್ತವಾದರೆ ಚೆಂದಲ್ಲ."

ಎಂದು ಘಂಟಾಘೋಷವಾಗಿ ಹೇಳಿದ್ದಾರೆ. ವಿಭಕ್ತದಲ್ಲಿ ಅವಿಭಕ್ತ ಭಾವವನ್ನು ಕಾಣಬೇಕೆಂದು ಗೀತೆ ಹೇಳಿದ ದೃಷ್ಟಿಯಿಂದ (೧೮-೨೦) : "ಅವಿಭಕ್ತಂ ವಿಭಕ್ತೇಷು ~~ಈಕ್ಷತೇ~~ ತಜ್ಞಾನಂ ಸಾತ್ವಿಕಂ": ಆ ಅವಿಭಕ್ತಭಾವ ಎಂಬುದು ಅವ್ಯಯ ಸ್ವರೂಪದ ಐಕ್ಯಭಾವವು. ತದಿತರ ಭಾವಗಳು ಕನಿಷ್ಠ.

"ಕಲ್ಪವೃಕ್ಷವೃಂದಾವನಂಗಳಲಿ" ಪೊಕ್ಕು ಬೇಂದ್ರೆಯವರು ಕೊನೆಯಲ್ಲಿ ಅನುಭವಿಸಿದ್ದೇನನ್ನು ?

"ನಾನು ನೀನೊ ನೀ ನಾನೊ ಏನೊ
ಎನುತೆನುತಲೆಚ್ಚರಾದೆ"

ಇದು ವರಕವಿಯ **Perennial theme** ನಿತ್ಯಾತ್ಮವಸ್ತು. "ಊರಿಗೆ ಅರಸನಾದರೂ ತಾಯಿಗೆ ಮಗ" ಎಂಬ ಗಾದೆಯಂತೆ ಜಗದಗಲ ತಿರುಗಾಡಿ ಬಂದರೂ ದತ್ತಾತ್ರೇಯನ ಮೂರು-ನಾಲ್ಕಲ್ಲ, ಒಬ್ಬನೇ ಎನ್ನುತ್ತದೆ ಬೇಂದ್ರೆ ದತ್ತರಾಮರ ಹೃದಯವು. ಏಳು ಬಣ್ಣಗಳೂ ಶ್ವೇತಾಂತರ್ಗತವಾಗುತ್ತವೆ: ಏಳು ಸಾವಿರವಿದ್ದರೂ ಅಷ್ಟೇ. "ಬಹುರಹಮಧ್ಯ ಏಕಃ ಸ್ಯಾಂ" ಎಂಬ ಸಮರಸ ಜೀವನಸತ್ವದ ಸ್ಥಾಯಿಯು ದ್ರಷ್ಟಾರನ ಬೆನ್ನ ಬಿಡದು.

"ಜ್ಞಾನಿಯ ಗತಿ ಇರುಳೊಳಗತಿ
ನಿಜಜಾಗ್ರತ ಇರುವುದು"

ಈ ಜಾಗೃತಿ, ಜಾಗರ ಎಂಬುದು ಐಕ್ಯಾಭಿಜ್ಞಾನದ ಗಾನವು: "ಯಾ ನಿಶಾ ಸರ್ವ ಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ". ಸಂಯಮವು "ಏವಂ ಬುದ್ಧೇಃ ಪರಂಬುದ್ಧ್ವಾ ಸಂಸ್ತಭ್ಯಾತ್ಮಾನಮಾತ್ಮನಾ": ಈ ಸಂಸ್ತಂಭನವು ಸ್ಥಿತಪ್ರಜ್ಞೆಯು. ಅದು ಬೇಕು, ಇದು ಬೇಕು ಎಂದು ಹಪಹಪಿಸುವ ಹಾಗೂ ಹಲವೆಡೆ ಹರಿವ ಮರ್ಕಟಮನದ ಸ್ತಂಭನ, ಪರಮಧ್ಯೇಯದಲ್ಲಿ ಅದನ್ನು ಲಯಗೊಳಿಸುವ ಪ್ರಣಿಧಾನವು. ಕ್ಷುದ್ರವಸ್ತು ಕಾಮನೆಯ ನಿರಾಸವು. ಕಾಮ ಇಲ್ಲಿ ಷಡ್ವೈರಿಗಳ ಹಿರಿಯಣ್ಣ. ವಿಷಯಧ್ಯಾನ ಜನ್ಯವಾದ ವಿಷಯದಾಸ್ಯ. ವಿಷಯಗಳು ನಶ್ವರವಾದ ರಾಜಸ-ತಾಮಸ ಸೋಂಕುರೋಗಕ್ಕೆ ಎಡೆಗೊಡುವ ಬಾಹ್ಯಾಕರ್ಷಣೆಯನ್ನು ಉಂಟುಮಾಡುವ ಮೋಹ (**Delusion**) ಅಂತರ್ಮುಖತೆಯ ಶತ್ರು. ಜ್ಞಾನಿಯು ಆತ್ಮ: ಆತ್ಮವಿಲ್ಲಿ ಸಚ್ಚಿದಾನಂದವು--

The supreme awareness of never-ending self-conscious ness ಈ ಪರಮಧ್ಯೇಯವನ್ನು ಪರಮ ಕವಿಯು ಎಂದಾದರೂ ಮರೆತಾನೇ? ಜ್ಞಾನವು ಅಗ್ನಿ. ಅಜ್ಞಾನದಾಹಕ: ಯಾವುದು ನಿಷ್ಪಕ್ಷಪಾತತೆಯನ್ನು ಮರೆಯಿಸಿ. ಕ್ಷಣಿಕ ಭೌತಿಕ ಸುಖಗಳಿಗಾಗಿ ಪರಾವಲಂಬನ (ಪರಹಿಂಸಾವಲಂಬನ) ಮಾಡಿಸುವುದೋ ಅದು ಅಜ್ಞಾನವು — ಅದು ಬಾಹ್ಯರಮ್ಯತೆಯನ್ನುಳ್ಳದ್ದು. ಅಂತಾರಮ್ಯತೆಯಾದರೋ ಬಾಹ್ಯೈಕ್ಯಗಮ್ಯ.

"ತನ್ನ ತಾ ತಿಳಿಯುವ ಆ ಜ್ಞಾನ ಅಜ್ಞಾನ
ಒಳ ಹುರುಳ ತಿಳಿವಳಿಕೆ ಎಂತಾದೀತು ?
ಅರಿವಿಗೂ ಮರೆವಿಗೂ ಇರವೇ ಆಧಾರವು
ಆಧಾರ ಒಳಬಟ್ಟೆ ಮುಟ್ಟುವುದು.
ನಿದ್ದೆಯು ಮರೆವಲ್ಲ ಎದ್ದಾಗಿನರಿವಲ್ಲ
ತನ್ನ ತಾ ತಿಳಿದಾಗ ಕಾಂಬುದೇನು ?
ಬೆಳಕಿನ ಮಡಿಲಲ್ಲಿ ಬಣ್ಣ ಅಡಗಿದ ಹಾಗೆ
ಇಲ್ಲವಾಗುವುದಿಲ್ಲ ಉಂಟೆಂಬುದು.

ಇದಕ್ಕೆ "ಸ್ವರಸ ಸರಸತಿಯ ಸರಕೆ" ಇದೆ ಎಂದಿರುವುದು ಬೇಂದ್ರೆ ಹೃದಯವು. ಸ್ವರಸವು, ಆತ್ಮರಸವು (ಜಗದಾತ್ಮರಸವು, ವೈಶ್ವ ಆನಂದವು) ಅರವಿಂದ ಮಕರಂದದ ಬೆಳೆವಣಿಗೆಯ ಒಂದು ಆಯಾಮವು. ಹಲವು ಆಯಾಮಗಳು ಅವಚ್ಛಿನ್ನಗಳು: ಒಂದೇ ಒಂದಾದ ಆಯಾಮವು ಅನವಚ್ಛಿನ್ನವು. ಅದೇ ಸಮಗ್ರಾಯಾಮ. ಇಷ್ಟು ದೂರ ಬಲ್ಲವರನ್ನು ಒಯ್ಯಬಲ್ಲ ಸಾಲುಗಳು ಸೂಕ್ತಗಳು.

"ಬಲ್ಲವ ಬಲ್ಲನು ಏಕತಾನದ ನಾದ
ಜೀವದುನ್ಮಾದದ ಅನುಭವಿಯು"

ಏಕತಾನವು ಏಕತಾರಿ (ಕಿನ್ನರಿ), ಕಿಂದರಿ ಎಂಬುದರ ಗತ್ತು. ಗಾನ ವಿತಾನ— ಬೇಸರ ಬರಿಸುವಂಥ Monotony ಅಲ್ಲ ಇಲ್ಲಿ. ಇದು ಬ್ರಹ್ಮನಾದ, ಸರ್ವ-ನಾದ ಸಮಾಸ— "ಪ್ರತಿಕ್ಷಣಂ ಯದ್ ನವತಾಂ ವಿಧತ್ತೇ । ತದೇವ ರೂಪಂ ರಮಣೀಯತಾಯಾಃ" ಅರ್ಥಾತ್ ಏಕರೂಪದಲ್ಲಿದ್ದೇ ಅನೇಕ ರೂಪ ಚಮ-

ತ್ಕಾರವನ್ನು ಮಿಂಚಿಸುತ್ತಲೇ ಇರುವ ವಾಣೀವಿಲಾಸವು: "ಪರಾಂ ಪಶ್ಯಂತಿ ಯೋಗಿನಃ"— ಅಪರಿವರ್ತನೀಯ ಸತ್ಯದ ಸೂರ್ಯ ಕಿರಣಗಳು ಒಂದೇ ಗೋಪುರವಾಗಿ ನಿಲ್ಲುವುದು—ಅದನ್ನು ನೋಡಿದವರು ಅದೇ ಆಗುವರು !

"ಆತ್ಮೋದ್ಧಾರಕ ಕವಿ ಬೇಕು" ಎಂದು ("ಸಾಹಿತ್ಯ ಮತ್ತು ವಿಮರ್ಶೆ– ಪುಟ ೨೦) ದೃಢವಾಗಿ ನಂಬಿದ್ದರಿಂದ ಬೇಂದ್ರೆಯವರು ಆತ್ಮೋದ್ಧಾರಕ ಪದ್ಯಗಳಿಗೇ ಪ್ರಾಧಾನ್ಯವಿತ್ತು ಬರೆದರು. ಈ ಆತ್ಮವು ಜೀವಾತ್ಮವು. ಇವರ ಉದ್ಧಾರವು ಇವರ ವಿಕಾಸದಲ್ಲಿದೆ, ಗಡಿಯಿಲ್ಲದಷ್ಟರ ಮಟ್ಟಿಗೆ ಮೇಲೇರುವ ವಿಸ್ತಾರಶೀಲದ ಪರಾಕಾಷ್ಠೆ (Zenith) ಯಲ್ಲಿದೆ: ಜೀವಾತ್ಮತ್ವದ ಜಾಗರವನ್ನು ಪರಮಾತ್ಮತ್ವದ ಗಾಳಿಯು ನುಂಗುವುದರಲ್ಲಿದೆ. ಅಜಾಗರವೆಂಬ ಜಾಗರ ಅಜಗರ: ಅದನ್ನು ನಿತ್ಯಜಾಗರವೆಂಬ ಗರುಡ ನುಂಗಬೇಕು ಎಂಬ ಪ್ರೇರಣೆ (Stimulation) ಕೊಡುವ ಕವಿಕೃತಿಯೇ ಮಹಾಕ್ರತು, ಶತಕ್ರತುಃ ಅಂಥ ಕೃತಿಯ ಒಂದು ಋಕ್—

"ಬಾಂಧವ್ಯವು ಇದು ಬಂಧನವಾದರೆ
ಮುಕ್ತಜೀವನಕೆ ತೆರವಿಲ್ಲ;
ಸ್ವಭಾವ ಪರಿಪಾಕಕ್ಕಿಂಬಿದ್ದರೆ
ಸಾಮರಸ್ಯಕದು ಎರವಲ್ಲ."

ದತ್ತಾತ್ರೇಯರ ಅನಂತರ ಈ ಶತಮಾನದಲ್ಲಿ (ಅವರ ಕಾಲದಲ್ಲೂ) "ಆತ್ಮೋದ್ಧಾರಕ ಕವಿ" ಎಂಬ ಬಿರುದಿಗೆ ಸಂಪೂರ್ಣವಾಗಿ ಪಾತ್ರನಾದ ಕನ್ನಡ ಆರ್ಷ ಕವಿ ಆ ಅನನ್ಯತೆಯೊಡನೆ ಉದಯಿಸಿ ಬೆಳಗಲಿಲ್ಲ. ಸಂಸ್ಕೃತ ಕವಿ ವಾಸಿಷ್ಠ-ಗಣಪತಿಗಳಿದ್ದರು: ಇಂಗ್ಲಿಷ್ ಕವಿ ಅರವಿಂದರಿದ್ದರು. "ಉಮಾಸಹಸ್ರ" ಮತ್ತು "Savitri" ಅನುಕ್ರಮಿಕ ನಿದರ್ಶನಗಳು. ಆದ್ದರಿಂದ ಠಾಕೂರಾನಂತರದ (ಠಾಕೂರರು ಬಂಗಾಳೀಕವಿಗಳು) ಠಾಕೂರರು ಪದಗೇಯತ್ವದಲ್ಲಿ ಅದ್ವಿತೀಯರು ಎನ್ನಬಹುದು. ಏಕೆಂದರೆ ಅವರನ್ನು ಡಾಕ್ಟರ್ ಬಹಳ ಮೆಚ್ಚಿಕೊಂಡಿದ್ದಾರೆ. ಬಂಗಾಳದ ಕಾವ್ಯಕಲಾಕಿರೀಟ ರವೀಂದ್ರನಾಥ ಠಾಕೂರರದ್ದು. ಇತರ ಭಾಷೆಗಳಲ್ಲಿ ಅವರಿಗಾಗ ಸರಿಗಟ್ಟುವಂಥ ಗೀತಕಾರ (Songster) ಇದ್ದಂತಿಲ್ಲ. ಠಾಕೂರರನ್ನು ಬಂಗಾಳಿಗಳು (ಬಾಂಗ್ಲಾದೇಶೀಯರು ಕೂಡಾ)

ದಾರಿದೀಪವನ್ನಾಗಿ ಗ್ರಹಿಸಿದಂತೆ ಕನ್ನಡಿಗರು ಅಂಬಿಕಾತನಯ ದತ್ತರನ್ನು ಇನ್ನೂ ಆ ಪ್ರಮಾಣದಲ್ಲಿ ಅರ್ಥಮಾಡಿಕೊಳ್ಳಲಿಲ್ಲ. ಏಕೆಂದರೆ ಇಲ್ಲಿ Aids ರೋಗದಂತೆ ಕೋಮುವಾರುಮನಸ್ಕತೆಯು ಹಬ್ಬುತ್ತಾ ಬಂದಿತು; ಪ್ರಾದೇಶಿಕ ಸಂಕುಚಿತತೆ ಎಂಬ ಪ್ಯಾಶಿಸ್ ಸೇವನೆ ಅಧಿಕವಾಗುತ್ತಾ ಹೋಯಿತು: ಅಪಾತ್ರ ಕಲಾಭಿಜ್ಞರು ಸಾಹಿತ್ಯಾದಿಗಳ ಜಜ್ಜರಾಗುವ ರಾಜಕೀಯ ನಡೆದು. ಮುಸಲಕ್ಕೆ ಕಿಸಲಯ ಚಿಗುರಿತು. ಸಾಂಸ್ಕೃತಿಕ ಆತ್ಮದೈಗೆ ಸಾಂಸ್ಥಿಕ ಸ್ಪರ್ಧಾಲುತ್ವವು ವಿಸ್ತರಿಸುತ್ತಾ ಹೋಯಿತು— ಕರ್ಣಾಟವು (ಕನ್ನಡವಾಗಿ) ಕಲಹಮಗ್ನತೆಗೆ ಸಂಕೇತವಾಯಿತು. ಇದು ಬೇಂದ್ರೆಯವರು ಬಯಸಿದ ಕರ್ಣಾಟವಾಗಲಿಲ್ಲ. ಅವರು ಅನಸೂಯಾ ಶೀಲವನ್ನು ಬಯಸಿದವರು. ವ್ಯಾಸಮುನಿ ಹೇಳಿದಂತೆ—

"ದೃಶ್ಯತೇ ಧರ್ಮರೂಪೇಣ ಅಧರ್ಮಂ ಪ್ರಾಕೃತಶ್ಚರನ್
ಧರ್ಮಂಚಾಧರ್ಮರೂಪೇಣ ಕಶ್ಚಿದ ಪ್ರಾಕೃತಶ್ಚರನ್ ।
ಪ್ರಾಪ್ತಃ ಶಾಶ್ವತೋ ಧರ್ಮಃ ಸದಾಚಾರೇಣ ಮೋಹಿತೈಃ
ತೇನ ವೈದ್ಯಸ್ತಪಸ್ವೀ ವಾ ಬಲವಾನ್ ವಾ ವಿಮುಹ್ಯತೇ ॥"

ಈ ಪರಿಸರದ ವಾಸ್ತವಿಕತೆಯನ್ನೂ ಅರಿತ ಬೇಂದ್ರೆಯವರು ರಾಮಬಾಣದಂತೆ ಕರ್ಣನ ಶಕ್ತ್ಯಾಯುಧದಂತೆ ಇಂದ್ರನ ವಜ್ರಾಯುಧದಂತೆ ವಿಡಂಬನಾಸ್ತ್ರವನ್ನು ಬಿಟ್ಟರು. ಅಂಥ ಅಸ್ತ್ರಗಳು ಜಗದ್ವ್ಯಾಪಕವಾಗಿ ಬೆಳೆದುನಿಂತದ್ದೂ ಉಂಟು. ಅವು ವರುಣನ ಪಾಶಗಳಂತಿವೆ:

"ಕೋಳಿಯ ಕೊಯ್ದರೆ ಕೇಳುವರುಂಟು
ಕುರಿಯನು ~~ಕೂಹದೆ~~ ಕೆರಳುವರುಂಟು
ಗುಬ್ಬಿ ಮಾನವನ ಕೊಯ್ದರು ಕೊಂದರು ಕಡಿದರೆ ಏನು
ಕೊಂದನು ಮಾನವ ತನ್ನನು ತಾನು
... ...
ಇದುವೇ ಕಾಳಿಯ ಪೂಜೆಯು ಶುದ್ಧ
ಇದಕ್ಕೆ ಎಂಬರು ಹುಂಬರು ಯುದ್ಧ !"

ಯುದ್ಧ, ಕಲಹ, ವಧೆ, ಪೀಡೆ, ನಿಷ್ಪಾಪರ ಹಿಂಸೆಗಳಲ್ಲಿ ತೊಡಗುವ ದೈತ್ಯ, ದಸ್ಯು, ಪಣಿ, ಅಹಿಗಳ ಸಂಹಾರಕ್ಕೆ ವೇದದಲ್ಲಿ ಇಂದ್ರನನ್ನು ಆಯುದ್ಧ-

ಕೊಂಡಿರುವುದು ವಿಡಂಬನ ಶೈಲಿಯಲ್ಲಲ್ಲ— ನೇರವಾಗಿ. ಖಾರವಾಗಿ, ಉಗ್ರ-ವಾಗಿ ಹೇಳುವ ಶೈಲಿಯಲ್ಲಿ:—

ಯಃ ಶಶ್ವತೋ ಮಹ್ಯೇನೋ ದಧಾನಾನ್
ಅಮನ್ಯ ಮಾನಾಞ್ ಛರ್ವಾ ಜಘಾನ ।
ಯಃ ಶರ್ಧತೇ ನಾನುದದಾತಿ ಶೃಧ್ಯಾಂ
ಯೋ ದಸ್ಯೋರ್ಹಂತಾ ಸ ಜನಾ ಸ ಇಂದ್ರಃ ॥

ಅನಿರೀಕ್ಷಿತವಾಗಿ ಪಾಪ ಮಾಡುವವರನ್ನು ಇಂದ್ರನು ತನ್ನ ಬಾಣದಿಂದ ಕೊಲ್ಲುತ್ತಾನೆ. ಸೊಕ್ಕಿದವನ ಸೊಕ್ಕನ್ನು ಅವನು ಕ್ಷಮಿಸನು. ದಸ್ಯುವನ್ನ-ವನ್ನು ಅವನು ವಧಿಸುತ್ತಾನೆ.

ಯಃ ಶಂಬರಂ ಪರ್ವತೇಷು ಕ್ಷಿಯಂತಂ
ಚತ್ವಾರಿಂ ಶ್ಯಾಂ ಶರದ್ಯನ್ವವಿಂದನ್ ।
ಓ ಜಾಯಮಾನಂ ಯೋ ಅಹಿಂ ಜಘಾನ
ದಾನುಂ ಶಯಾನಂ ಸ ಜನಾ ಸ ಇಂದ್ರಃ ॥

ಇಂದ್ರನು ೧೪ ನೆಯ ಶರದೃತುವಿನಲ್ಲಿ ಪರ್ವತಗಳ ನಡುವೆ ನೆಲೆಸಿದ್ದ ಶಂಬರಾಸುರನನ್ನು ಪತ್ತೆಹಚ್ಚಿ (ಸಂಹರಿಸಿದನು): ಸ್ವ ಸಾಮರ್ಥ್ಯವನ್ನು ಪ್ರಕಟಿಸಬಂದ ಸರ್ಪ (ನಾಗ) ವನ್ನು ವಧಿಸಿದನು: ದಾನುಪುತ್ರನಾದ ಮಲಗಿದ್ದ ವೃತ್ರನನ್ನು ಕೊಂದನು.

ರೌಹಿಣ, ವೃತ್ರ, ಶಂಬರ, ವಲ. ಶುಷ್ಣರೂ ಅಹಿ ಮುಂತಾದ ದುಷ್ಟರ ಜಾತಿಗೆ ಸೇರಿದವರು. ಅವರ ಸಂಹಾರವನ್ನು ಇಂದ್ರನಿಂದ ಋಷಿಗಳು ಮಾಡಿಸಿದ್ದಾರೆ. ಇಂಥ ಭ್ರಷ್ಟಾಚಾರಪರಾಯಣರ ಉಪಟಳವನ್ನು ಬೇಂದ್ರೆ-ಯವರ ವಿಡಂಬನವು ಬಲವಾಗಿ ಖಂಡಿಸುತ್ತದೆ. ಲೋಭಮೂಲರಾದ ಪಾಪಿಗಳನ್ನು ಅವರ "ಕುರುಡುಕಾಂಚಾಣವು" ಅತ್ಯುಗ್ರವಾಗಿ ಟೀಕಿಸಿದೆ.

"ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ।
ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ" ॥

ಎಂಬ ಶ್ರೀಕೃಷ್ಣನ ಹೃದಯವು ಬೇಂದ್ರೆಯವರಲ್ಲಿದೆ.

"ಉತ್ಸೀದೇಯುರಿಮೇಲೋಕಾನ ಕುರ್ಯಾಂ ಕರ್ಮಚೇದಹಂ !
ಸಂಕರಸ್ಯ ಚ ಕರ್ತಾಸ್ಯಾಮುಪಹನ್ಯಾಮಿಮಾಃ ಪ್ರಜಾಃ" ॥

ಶ್ರೀಕೃಷ್ಣನಂತೆ ಈ ಹೊಣೆಯನ್ನು ಶಿಷ್ಟನು ಹೊರಬೇಕೆಂಬುದು ಹೇಂದ್ರ ಅವರ ದರ್ಶನವಲ್ಲಿರುವುದರಿಂದ. ಕೆಲವು ಪದ್ಯಗಳಲ್ಲಿ ಅವರು "ಕಾಲೋಽಸ್ಮಿ ದುಷ್ಟಕ್ಷಯಕೃತ್" ಎಂದು ಭಾರತೀಯರು ರಾಷ್ಟ್ರೀಯರು ಎದ್ದೇಳಲು ಸ್ವಾತಂತ್ರ್ಯಸಮರದಲ್ಲಿ ಸ್ವತಃ ಧುಮುಕಿ "ಮೂವತ್ತುಮೂರು ಕೋಟಿ" ಎಂಬ ಅದ್ಭುತ ಮಾಂತ್ರಿಕ ಪದ್ಯದಲ್ಲಿ ಹೇಡಿಗಳನ್ನು ಅವಹೇಳನಮಾಡಿ ಶೂರರನ್ನು ಹುರಿದುಂಬಿಸಿದರು. "ಅಗ್ನಿರ್ವೈ ದೇವಾನಾಂ ಮುಖಂ" ಎಂದಂತೆ ದೇಶಿಯರಲ್ಲಿ ಸ್ವಧರ್ಮ (ಸ್ವದೇಶಧರ್ಮ)ವನ್ನು ಪ್ರಾಣತೆತ್ತಾದರೂ ರಕ್ಷಿಸಬೇಕೆಂದು ಕಠೋರವಾಗಿಯೂ ನುಡಿದಿದ್ದಾರೆ. ಅವರ "Hate Cowards Campain" ಬಹಳ ಹೊಸದಾಗಿದೆ, ರೌದ್ರಾಕಾರ ತಾಳಿದೆ. ಮಹಾತ್ಮಾಗಾಂಧಿಯವರೆಂದರೆ "Cowardice is sin— ಹೇಡಿತನವು ಪಾಪ ಬೀಜ" ಎಂಬುದನ್ನು ದತ್ತಾವತಾರಿಯಾಗಿ ಅವರು ಗರ್ಜಿಸಿ ತರ್ಜಿಸಿದ್ದಾರೆ, ಅಣಕಿಸಿದ್ದಾರೆ, ಮೂದಲಿಸಿದ್ದಾರೆ. "ವೀರಃ ಸರ್ವಂ ಪಾಲಯತಿ" ಎಂದ ವ್ಯಾಸನ ಮಹಾವಾಕ್ಯದ ತಾತ್ಪರ್ಯವಿದು.

"ಇದಂ ಬ್ರಾಹ್ಮಮಿದಂ ಕ್ಷಾತ್ರಂ ಶಾಪಾದಪಿ ಶರಾದಪಿ"

ಎಂಬ ಛಲದಂಕಮಲ್ಲತನದ ಧರ್ಮರಕ್ಷಕತ್ವದ ಅವರ ಪದ್ಯಗಳು ಸತ್ತವನು ಚಿತೆಯಿಂದ ಮತ್ತೆ ಎದ್ದುಬರುವಷ್ಟು ಪ್ರಣೋದ (Force) ಉಳ್ಳದ್ದಾಗಿವೆ. ಅವರೇ ಹೇಳಿದಂತೆ "ನಿರ್ಭಯಾ ನಿನ್ನ ನಾಡೀಚ್ಛಂದ ಸ್ವಚ್ಛಂದ" ಎಂಬ ಅಪ್ರಿಯಸತ್ಯ ವಕ್ತೃತ್ವಕ್ಕೂ ಅವರು ಜ್ಯೇಷ್ಠ ನಿದರ್ಶನರಾಗಿದ್ದಾರೆ. ಅವರ ಆ ರುದ್ರಾವತಾರದಲ್ಲಿ ಸಿಕ್ಕಿದವರು ನರಪಶುಗಳು:

"ಧಿಗ್ಬಲಂ ಕ್ಷತ್ರಿಯ ಬಲಂ ಬ್ರಹ್ಮತೇಜೋ ಬಲಂ ಬಲಂ ।
ಏಕೇನ ಬ್ರಹ್ಮದಂಡೇನ ಶತಾಸ್ತ್ರಾಣಿ ಹತಾನಿ ಮೇ ॥"

ಎಂದು ಧರ್ಮಪರಿಪಂಥಿಯು ಹೇಳಲೇಬೇಕಾಗುತ್ತದೆ. ಅಂಥ ಕಾವ್ಯ ಸಂದರ್ಭ-ಗಳಲ್ಲಿ ಕೊಡಲಿ ರಾಮನಂತೆ ಅವರು—

"ಓಜಸ್ತೇಜೋದ್ಯುತಿಧರಃ ಪ್ರಕಾಶಾತ್ಮಾ ಪ್ರತಾಪನಃ"

ಆಗಿ ಕಾಣುತ್ತಾರೆ: ಶ್ರಾವಣದ ಝುಂಝಾವಾತದ ಭೈರವನಂತೆ ತಾಂಡವಿಸುತ್ತಾರೆ. ಈ ಜಾತವೇದಸ್ತ್ವವು ಅವರ ಪಾವಕ (ಪವಿತ್ರೀಕಾರಕ) ದಾಹಕತ್ವವನ್ನು, ಸಮುದ್ರಾಂತರ್ಗತ ವಡವಾನಲ ದಾಟಿದ್ದಂತೆ, ವಾಗ್ವಜ್ರ ವೃಷ್ಟಿಯಲ್ಲಿ ಏಳುವಂತೆ ಮಾಡುವುದನ್ನು ಕಾಣಬಹುದು.

"ಯಸ್ಯವ್ರತೇ ಪೃಥಿವೀ ನನ್ನಮೀತಿ
ಯಸ್ಯವ್ರತೇ ಶಫವಜ್ಜರ್ಭುರೀತಿ
ಯಸ್ಯವ್ರತ ಓಷಧೀರ್ವಿಶ್ವರೂಪಾಃ"

ಎಂದೂ "ದೂರಾತ್ ಸಿಂಹಸ್ಯ ಸ್ತನಥಾ ಉದೀರತೇ
ಯತ್ಪರ್ಜನ್ಯಃ ಕೃಣುತೇ ವರ್ಷ್ಯಂ ನಭಃ"

ಎಂದೂ ಗರ್ಜಿಸುವ ವೇದೋಕ್ತಿಗಳು ವರಕವಿಯ ವೀರಾವೇಶದ ಮಾತುಗಳಲ್ಲಿ ಮೂಡಿಬಂದಂತೆ ಭಾಸವಾಗುತ್ತದೆ. ಈ ಧರ್ಮವೀರತ್ವದ ವಾಗ್‌ವೃಷ್ಟಿಧಾರಾಸಂಪಾತದಿಂದ ಅವರು ಮಹಾವಾಗ್ಮಿಗಳೆಂದೂ ಪ್ರಸಿದ್ಧರಾದರು. ಶಿವನು ರುದ್ರನೂ ಆಗುತ್ತಾನೆ ಸಂದರ್ಭಾನುಸಾರ—
"ವಸುಧಾಧರ ಕಂದರಾಭಿಸರ್ಪೀ ಪರೇಃ ಪ್ರತಿ ಶಬ್ದೋಽಪಿನಾಗಾನ್‌ಹಿನಸ್ತಿ"
ಎಂಬ ಮುಖವೂ ಬೇಂದ್ರೆಯವರ ವ್ಯಕ್ತಿತ್ವಕ್ಕಿದೆ. ಇದು ಕಂಡವರಿಗಷ್ಟೆ ಕಾಣಿಸುತ್ತದೆ :

"ಅಕ್ಷಿಣ್ವಂತಃ ಕರ್ಣವಂತಃ ಸಖಾಯಃ
ಮನೋಜವೇಷ್ವಸಮಾ ಬಭೂವುಃ ।
ಆದಘ್ನಾಸ ಉಪಕಕ್ಷಾಸ ಉತ್ವೇ
ಹ್ರದಾ ಇವಸ್ನಾತ್ವಾ ಉತ್ವೇದದೃಶ್ರೇ ॥"

ಒಂದು ಗುಂಡಿಯಲ್ಲಿ ಸ್ನಾನಮಾಡಲು ಇಳಿದ ಕಣ್ಣುಳ್ಳ ಹಾಗೂ ಕಿವಿಯುಳ್ಳ ಸ್ನೇಹಿತರು ತಮ್ಮ ತಮ್ಮ ಮನಃಶಕ್ತಿಯ ಧಾವನದಲ್ಲಿ ಬೇರೆ ಬೇರೆಯಾಗಿಯೂ ಅಸಮಾನರಾಗಿಯೂ ಇದ್ದುದರಿಂದ ಅವರಲ್ಲಿ ಒಬ್ಬ ಈ ಹೊಂಡದ ನೀರು ನನ್ನ ಮೊಣಕಾಲು ಮುಳುಗುವಷ್ಟಿದೆ ಎಂದರೆ ಇನ್ನೊಬ್ಬ ಕಂಕುಳು ಮುಳುಗುವಷ್ಟಿದೆ ಎಂದನಂತೆ— ಮತ್ತೊಬ್ಬ ಮತ್ತೊಂದು ಅಳತೆಯನ್ನು ಹೇಳಿದನಂತೆ.

ಇದು ಮಾನವರ ಭಿನ್ನಾಭಿಪ್ರಾಯಗಳ ಮೂಲ. ಅದರಲ್ಲೂ ತಮ್ಮ ತಮ್ಮ ಜ್ಞಾನದಮಟ್ಟವನ್ನು ಅಳೆದು ತಿಳಿದುಕೊಳ್ಳುವುದರಲ್ಲಿ ಪಂಚೇಂದ್ರಿಯ ಪ್ರತಿಷ್ಠಿತ ಮಾನಸರಾರೂ ಬಹಳ ವಿಷಯಗಳಲ್ಲಿ ಐಕಮತ್ಯಕ್ಕೆಬರಲಾರದ್ದಕ್ಕೆ ಹೇತು. ಬೇಂದ್ರೆಯವರ ಭೇರುಂಡ ಹಾರಿದ ಎತ್ತರಕ್ಕೆ ಹಾರಬಲ್ಲ ಮನುಷ್ಯ ಮಾನವರ ಸಂಖ್ಯೆ ಅಲ್ಪ. ಅವರು ಕೇವಲ ಲಾವಣಿ ಬರೆಯುವವರೆಂದು ಘನವಿದ್ವಾಂಸರೊಬ್ಬರು ಒಮ್ಮೆ ಹೇಳಿದ್ದುಂಟು. ಈಗ ಅವರು ಕವಿಗಳಷ್ಟೇ ಅಲ್ಲ, ಸಮಾಧ್ಯನುಭವ ಪಡೆದ ಮಹಾಯೋಗಿಗಳೆಂಬ ಒಬ್ಬಿಬ್ಬರೂ ಸಿಗ-ಬಹುದು. ಆದರೆ ಇಲ್ಲಿ ಕೊಡುತ್ತಿರುವ ಚಿತ್ರವು "ಓಂಕಾರದ ಶಂಖನಾದಕಿಂತ ಕಿಂಚಿದೂನ" ಎಂಬಂತೆ ಯೋಗಿತ್ವದಿಂದ ಸ್ವಲ್ಪ ನ್ಯೂನವಾದ ಮಹಾಭಕ್ತತ್ವದ ಚಿತ್ರ. ಈ ಬೇಂದ್ರೆ-ನಿವೃತ್ತಿ, ಜ್ಞಾನದೇವ, ಸೋಪಾನ, ಮುಕ್ತಾಬಾಯಿ, ಏಕನಾಥ, ನಾಮದೇವ, ತುಕಾರಾಮ-- ಎಂಬ ಪಾತ್ರಗಳ ಭಂಗಿ-ಭಣಿತಿಗಳನ್ನುಳ್ಳವರು. ಅಥವಾ ಕನ್ನಡದ ಸರ್ವಜ್ಞಕವಿಯ ಮತ್ತು ಕನಕದಾಸರ ಹಾಗು ರನ್ನ ಕುಮಾರವ್ಯಾಸರ ಜ್ಞಾನಸಾಮಗ್ರಿಗಳಿಂದ ಸಮನ್ವಿತನಾದ ಶಬ್ದಾರ್ಥ ವ್ಯೂಹ ರಚನಾ ಚಕ್ರವರ್ತಿಯ ಚಿತ್ರ. ಈ ಚಿತ್ರದ ಕಲಶವು ಗುರು ಅರವಿಂದರ To See into the life of things— ವಿಷಯಗಳ ಅಂತರ್ಜ್ಞಾನದ ದರ್ಶನ ಮಾಡಿಕೊಳ್ಳಬಲ್ಲ Divine Insight-ದಿವ್ಯ ಸೂಕ್ಷ್ಮದೃಷ್ಟಿ ಬೇಂದ್ರೆ-ಯವರಲ್ಲಿ ಪ್ರತಿಫಲಿಸಿರುವುದು. ಈ ಶಕ್ತಿಗೆ ಉದಯಾಸ್ತ **ಯಾ** ಆಗಮನ ನಿರ್ಗಮನಗಳಿಲ್ಲದೆ ಹೋಗಿದ್ದರೆ ಅವರು ಸಾಕ್ಷಾತ್ ಯೋಗಿಯ ಮಟ್ಟದವರೇ ಆಗಿ ಹೋಗುತ್ತಿದ್ದರು: ಎರಡನೆಯ ಅರವಿಂದ ಮಹರ್ಷಿಗಳೆಂದು ಜನರು ಅವರನ್ನು ಕರೆಯುವಂತಾಗುತ್ತಿತ್ತು. ಈಗ ಅವರು Link road ಅರವಿಂದರಿಗೂ ನಮಗೂ (ಸೇತುವಾಗಿದ್ದಾರೆ) ಸಂಬಂಧವಿಧಾಯಕ ರಸ್ತೆಯಾಗಿದ್ದಾರೆ. ಶಂಕರಾರ್ಥ ವಿವರಣೆ ರಮಣರಿಂದಾಗಿದೆ: ರಮಣಾರ್ಥ ವಿವರಣೆ ಅರವಿಂದರಿಂದಾಗಿದೆ. ಅರವಿಂದಾರ್ಥ ವಿವರಣೆಯು ಶಾಸ್ತ್ರೇತರ ಮಾರ್ಗದ ಮೂಲಕ ಬೇಂದ್ರೆಯವರಿಂದಾಗಿದೆ. "ನಾನೃಷಿಃ ಕುರುತೇ ಕಾವ್ಯಂ" ಎಂಬ ಮಾತಿನಂತೆ ಋಷಿಸದೃಶ ಪಟ್ಟವು ಬೇಂದ್ರೆಯವರದು. ಅವರ Perfection in spontaneity ಕಾವ್ಯ ಗಂಗಾವತರಣದ ಸ್ವರೂಪವಿದು—ಸ್ವಯಮುದ್ಬುದ್ಧ

ಗಂಗಾಜಲೋತ್ಸವಗಳ ರಂಗತ್ತರಂಗದ ಮಾಟವು. ಪ್ರಿಯಮಿತ್ರ ಶ್ರೀ ಗಂಗಪ್ಪ ವಾಲಿಯವರು ಏನೆಂದಿದ್ದಾರೆ ?—

"ನಿನ್ನಂಥ ಕವಿ ನೀನೆ ಅಂಬಿಕಾತನಯಾಂಕ
ನಿನ್ನ ಮಾತಿನೊಳಿಹುದು ಕನ್ನಡದ ಬಿರಿಬಿಂಕ
ನಿನ್ನ ನುಡಿ ಜೀವನದ ಅನುಭವದ ಹೊನ್ನಕಿಡಿ
ನಿನ್ನ ನಡೆ ಗೆಳೆತನದ ಗೆಲವುಗಳ ಸಿರಿಯ ನುಡಿ.

ಹಳ್ಳಿಗನ್ನಡದಲ್ಲಿ ಮೆಲ್ಲುಲಿಯ ಮೆಲ್ಪಿನಲಿ
ಚೆಲ್ಲವರಿದಿವೆ ನಿನ್ನ ಭಾವಗಳು ಬಲ್ಪಿನಲಿ
ಸವ್ಯವಾಯಿತು ಲೇಖ ನಿನ್ನ ಲೇಖನಿಯಿಂದ
ದಿವ್ಯವಾಯಿತು ಕಾವ್ಯ ನಿನ್ನೆದೆಯ ದನಿಯಿಂದ

ಸುಖದುಃಖಗಳ ಪಾಕ ನಿನ್ನ ಕಾವ್ಯದ ಪಾಕ
ಸಖಿಗೀತವಾಗಿಹುದು ಬಾಳುವೆಯ ಪರಿಪಾಕ
ಕುಣಿಯೋಣು ಬಾರಽಽ ಎಂಬ ಹಾಡನು ಹಾಡಿ
ದಣಿವನೋಡಿಸಿ ಬಿಡುವೆ ಭಾರವನು ಕಿರಿ ಮಾಡಿ

ಸಮರಸವೆ ಜೀವನವು ಎಂದೊರೆದ ಸಮದರ್ಶಿ
ನಮಿಸುವೆನು ಇದೊ ನಿನಗೆ ಕನ್ನಡದ ಕಾವ್ಯರ್ಷಿ."

ಈ ವಿಮರ್ಶೆಯ ಮಾತು ಅಪ್ರತಿಭಟನೀಯ. ವಾಲಿಯವರೂ ಹೀಗೆ ಹೇಳಬಹುದು ಬೇಂದ್ರೆಯವರನ್ನು ಕುರಿತು :

"ನಿನ್ನ ದೂತಪಾದಗಳ ಮುಟ್ಟಿ ಕಟ್ಟಿದರು ಕಬ್ಬವೊಂದು
ನಿನ್ನ ಭಾವ ಬೆನ್ನಟ್ಟಿ ಕಂಡರೋ ಯಾರೊ ಹಬ್ಬವೆಂದು
ನಿನ್ನ ದೂತಗರಿ ಗರುಡನದಿರು ಕಳುಹುವರೆ ಗುಬ್ಬಿಯೊಂದು
ಅಂಚೆಕೊಂಚೆ ಶುಕಕಾಕಕೋಕ ಬಕ ಕೇಕಿ ಭೇಕಿ ಎಂದು"

ಮಿಕ್ಕ ದೋಷೋದ್ಘಾಟಕರನ್ನು ಕುರಿತು—

"ಕಾಕಾ ವೃಕಾ ಭೇಕ ಬಕಾಶ್ಚ ಘೂಕಾಃ
ಪ್ರಣಮ್ಯಯುಷ್ಮಾನಿದಮೇವಯಾಚೇ"
[illegible]
[illegible]

ಎಂದು ಪ್ರಸ್ತುತ ಲೇಖಕನು ವಾಲಿಯುವರೊಡನೆ ದನಿಗೂಡಿಸುತ್ತಾನೆ.

"ಗುರುವಿಂದ ತುಂಬಿ ಅರವಿಂದ ತುಂಬಿ ತುಂಬುರುವಿನಿಂದ ತುಂಬಿ
ತಾಯೆಂದು ತುಂಬಿ ತಂದೆಂದು ತುಂಬಿ ಕಂದನ್ನ ತನ್ನ ತುಂಬಿ ।
ಅಂಬಿಕೆಯು ತುಂಬಿ ನಂಬಿಕೆಯು ತುಂಬಿ ಕಣ್ಗೊಂಬೆ ರಂಭೆ ತುಂಬಿ
ಶ್ರೀಮಾತೆ ತುಂಬಿ ಈ ಮಾತೆ ತುಂಬಿ **ತಂತಾನೆ** ಬಂತು ತುಂಬಿ ॥"

ಎಂಬ ಅಂದತ್ತವಾಣಿಯು ತನ್ನ ಸ್ವಯಮುದ್ಬುದ್ಧತೆಯನ್ನು ಬಲ್ಲದು. ತಾನು ಯಾವ ಮಟ್ಟದ ಕವಿ ಎಂಬುದು ಬೇಂದ್ರೆಯವರಿಗೆ ಗೊತ್ತು. ಅದನ್ನು ಅವರಿಗೆ ಇನ್ನೊಬ್ಬರು ತಿಳಿಸಿಹೇಳಬೇಕಾಗಿಲ್ಲ. ಆದುದರಿಂದ ಅವರು ಸ್ತುತಿಯಿಂದಾ ವಿಮುಕ್ತರಾದ ಕವಿಗಳು, ಸನ್ಮಾನಾಸನ್ಮಾನಗಳ ಆಸೆಯಿಂದ ಮುಕ್ತರಾದ ಕವಿಗಳು. "ಬಾಲಾದಪಿ ಸುಭಾಷಿತಂ" ಎಂದು ಸ್ವದೋಷೋದ್ಘಾಟಕ ಕವಿಗಳು, ನಿಜವಾದ ದೋಷೋದ್ಘಾಟನವನ್ನು ಬಾಲಕ ಮಾಡಿದರೂ ಅದನ್ನು (ಅದು ನಿಜವಾಗಿರುವಾಗ) ಪರೋಪದೇಶದಂತೆ ತಮ್ಮನ್ನು ತಿದ್ದಿಕೊಳ್ಳುವ ಆತ್ಮೋದ್ಧಾರಬುದ್ಧಿಯು ಬೇಂದ್ರೆಯವರಲ್ಲಿ ಇದ್ದುದನ್ನು ನಾನು ಕಂಡಿದ್ದೇನೆ. ಇಂದಿನ ಈ ಅಹಮಿಕೆಯ ಯುಗದಲ್ಲಿ ಇದುಕೂಡಾ ಅಪೂರ್ವವಾದ ಮಹಾವಿಮರ್ಶಕ ಲಕ್ಷಣವು. ಆದ್ದರಿಂದಲೇ ಅವರು ಸಾಹಿತ್ಯವಿಮರ್ಶೆಯಲ್ಲೂ ಅಧಿಕಾರವಾಣಿಯಿಂದ ಮಾತಾಡಲು ಅರ್ಹರಾದರು. ಸಾಹಿತ್ಯವಿಮರ್ಶೆಯನ್ನಲ್ಲದೆ ಅವರು ಸಾಹಿತ್ಯಸಂಶೋಧನವನ್ನೂ ಮಾಡಿದರು. ಜಗನ್ನಾಥ ಪಂಡಿತನನ್ನು ಷಹಜಹಾನನ ಆಸ್ಥಾನಕ್ಕೆ ಓಡಿಸುವ ವಿದ್ವನ್ಮಾನಿಗಳು ಸ್ವಾಹಂಕಾರವಶಾತ್ ಉದಾಸೀನ ಮಾಡಿದರೆ ಯಾರೇನು ಮಾಡಬೇಕು? ಆದರೆ ಭಾಸನ ನಾಟಕಗಳು "ಕಾಲೋಽಹ್ಯಯಂ ನಿರವಧಿರ್ ವಿಪುಲಾಚ ಪೃಥ್ವೀ" ಎಂಬ ಭವಭೂತ್ಯುಕ್ತಿಯನ್ನು ಸಿದ್ಧಮಾಡಿದ್ದರಿಂದ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ಸತ್ಕಾವ್ಯಕ್ಕೂ ಸದ್ವಿಮರ್ಶೆಗೂ ಅಮರತೆ ಸಿದ್ಧಿಸದೆ ಹೋಗದು.

|| **ಓಂ ತತ್ ಸತ್** ||

ಬೇಂದ್ರೆ ಕೃತಿ ಪರಿಚಯ

ಕವನ ಸಂಗ್ರಹಗಳು : ಕೃಷ್ಣಾಕುಮಾರಿ, ಗರಿ, ಸಖೀಗೀತ, ಮೂರ್ತಿ ಮತ್ತು ಕಾಮಕಸ್ತೂರಿ, ಉಯ್ಯಾಲೆ, ನಾದಲೀಲೆ, ಮೇಘದೂತ, ಹಾಡು ಪಾಡು ಗಂಗಾವತರಣ, ಸೂರ್ಯಪಾನ, ಹೃದಯ ಸಮುದ್ರ, ಮುಕ್ತಕಂಠ, ಚೈತ್ಯಾಲಯ, ಜೀವಲಹರಿ, ಅರಳುಮರಳು, ನಮನ, ಸಂಚಯ, ಉತ್ತ-ರಾಯಣ, ಮುಗಿಲಮಲ್ಲಿಗೆ, ಯಕ್ಷಯಕ್ಷಿ, ನಾಕುತಂತಿ, ಮರ್ಯಾದೆ, ಶ್ರೀಮಾತಾ, ಬಾ ಹತ್ತರ, ಇದು ನಭೋವಾಣಿ, ವಿನಯ, ಮತ್ತೆ ಶ್ರಾವಣಾ ಬಂತು, ಒಲವೆ ನಮ್ಮ ಬದುಕು ಮತ್ತು ಚತುರೋಕ್ತಿ ಮತ್ತು ಇತರ ಕವನಗಳು.

ಮರಣೋತ್ತರ ಕವನ ಸಂಗ್ರಹಗಳು : ಪರಾಕಿ, ಕಾವ್ಯವೈಖರಿ, ತಾಲೆಕ್ಕ-ಣಿಕೆ ತಾದೌತಿ, ಬಾಲಬೋಧೆ ಮತ್ತು ಚೈತನ್ಯದ ಪೂಜೆ (ಪ್ರಾರ್ಥನಾ ಪದ್ಯಗಳ ಸಂಗ್ರಹ).

ನಾಟಕಗಳು : ದೆವ್ವನಮನೆ, ಹಳಿಯ ಗೆಳೆಯರು, ಸಾಯೋಆಟ, ತಿರುಕನ ಪಿಡುಗು, ಗೋಲ್, ಉದ್ಧಾರ, ಜಾತ್ರೆ, ನಗೆಯ ಹೊಗೆ, ಮಂದೀಮದಿವಿ, ಮಂದೀಮಕ್ಕಳು, ಮಂದೀಮನಿ, ಅಥರಾ ಈಥರಾ, ಶೋಭನಾ ಮತ್ತು ಮಕ್ಕಳು ಅಡಿಗೆ ಮನೆ ಹೊಕ್ಕರೆ.

ವಿಮರ್ಶೆ : ಸಾಹಿತ್ಯ ವಿಮರ್ಶೆ, ಸಾಹಿತ್ಯ ಸಂಶೋಧನೆ, ವಿಚಾರ ಮಂಜರಿ, ಮಹಾರಾಷ್ಟ್ರ ಸಾಹಿತ್ಯ, ಕನ್ನಡ ಸಾಹಿತ್ಯದಲ್ಲಿ ನಾಕು ನಾಯಕರತ್ನಗಳು ಮತ್ತು ಸಾಹಿತ್ಯದ ವಿರಾಟ್ ಸ್ವರೂಪ.

ಭಾಷಣಗಳ ಸಂಗ್ರಹ, ಅನುವಾದಿತ ಗ್ರಂಥಗಳು, ಮರಾಠಿಯಲ್ಲಿ ಗ್ರಂಥರಚನೆ ಮೊದಲಾದವುಗಳು.

ಪ್ರೊ. ಬಿ. ಎಚ್. ಶ್ರೀಧರ

ಬವುಲಾಡಿ ಶ್ರೀಧರ ಹೆಬ್ಬಾರ ದಕ್ಷಿಣ ಕನ್ನಡ ಜಿಲ್ಲೆಯವರು. ಇವರ ಜನ್ಮ ೫-೨-೧೯೧೮.

ಭಾರತೀಯ ಕನ್ನಡ ಸಾಹಿತ್ಯರತ್ನರಾದ ಬಿ. ಎಚ್. ಶ್ರೀಧರ ಇವರು ಜನಪ್ರಿಯ ಸಂಸ್ಕೃತ ಪ್ರಾಧ್ಯಾಪಕರಾಗಿ, ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತ: ಕವನ, ವಿಮರ್ಶೆ, ವಿಡಂಬನೆ, ಹಾಸ್ಯಚಟಾಕಿ, ಶಾಸ್ತ್ರಗ್ರಂಥ, ಅನುವಾದ ಮೊದಲಾದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಮೂವತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ ವಿದ್ವಾಂಸರು. **ಕಾವ್ಯಸೂತ್ರ** ಮತ್ತು **ಜ್ಞಾನ ಸೂತ್ರ** ಎಂಬ ವಿಶ್ವಕೋಶ ಸದೃಶ ಗ್ರಂಥಗಳ ಕೊಡುಗೆಯನ್ನು ಇವರು ಸಾಹಿತ್ಯಕ್ಕೆ ನೀಡಿದ್ದಾರೆ.

ಶ್ರೀಧರ ಅವರ 'ಬೇಂದ್ರೆ'- ಎಂಬ ಪುಸ್ತಿಕೆ ೧೯೫೭ ರಲ್ಲಿ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜ, ಉಡುಪಿಯಿಂದ ಪ್ರಕಟವಾಗಿತ್ತು. ಬೇಂದ್ರೆ ಕಾವ್ಯದ ಸೆಲೆ, ಸುಳುಹು, ಮಲಕು ಮತ್ತು ಮಹೋನ್ನತಿಯನ್ನು ವಿದ್ವತ್‌ಪೂರ್ಣವಾಗಿ " ಪಸರಿಪ ಕನ್ನಡಕ್ಕೊಡೆಯನೀಗ ವರಾಂಕಿತ ಬೇಂದ್ರೆ " ಎಂಬ ಪುಸ್ತಿಕೆಯಲ್ಲಿ ೧೯೮೬ ವಿವರಿಸಿದ್ದಾರೆ. ದ. ರಾ. ಬೇಂದ್ರೆಯವರು ನಿಕಟಪರಿಚಯ ಮತ್ತು ಸಹವಾಸವಿದ್ದ ಸಹೃದಯ ವಿಮರ್ಶಕರು- ಶ್ರೀಧರ. ಇವರು ಬೇಂದ್ರೆ ಭಾವಗೀತಗಳನ್ನು ಭಾವಪೂರ್ಣವಾಗಿ ಹಾಡಿ, ರಸಸ್ಪರ್ಶ-ವನ್ನುಂಟುಮಾಡಬಲ್ಲ ಸಮರ್ಥರಾಗಿದ್ದಾರೆ. ಇವರಿಗೆ ನನ್ನ ಕೃತಜ್ಞತಾ ಪೂರ್ವಕ ನಮನಗಳು.

-ವಾಮನ ಬೇಂದ್ರೆ

ತಿದ್ದುಪಡಿ

ಪುಟ	ಸಾಲು	ತಪ್ಪು	ಒಪ್ಪು
II	೧	KANNADAKKODEYA	KANNADAKKODEYANIGA
೭	ಕೊನೆಯದು	ಪೂರ್ವದಲ್ಲೀ ಪುರ	ಪೂರ್ವಪಲ್ಲೀಪುರ
೯	೨೫	ಸುಗುಣ	ಸಗುಣ
೧೧	೯	ಅ ಸಂಪ್ರಜ್ಞಾತ	ಅಸಂಪ್ರಜ್ಞಾತ
೧೨	೨೪	ಅವುಗಳಂತೆ	ಅವುಗಳಿಲ್ಲದ
೨೨	೨೨	ಓಜಃಸೂತಕ	ಓಜಃಸೂಚಕ
೨೫	೭	ಮಾತೆಗೆ ನಮೋ	ಮಾತಿಗೆ ನಮೋ
೨೭	೧೬	ಮೇರುತ್ತುಂಗ	ಮೇರೂತ್ತುಂಗ
೩೨	೭	ಬೇರು ಸಹಿತ	ಅದನ್ನು ಬೇರು ಸಹಿತ
೩೩	೧೩	ಮಧ್ಯ	ಮದ್ಯ
೩೭	೬	ಯೋ	ಯೊ
೪೦	ಕೊನೆಯದು	ಗಂಗಾತರಣ	ಗಂಗಾವತರಣ
೪೧	೧	ರಂಗತರಂತ	ರಂಗತ್ತರಂಗ
೪೨	೯	ಸ್ತುತಿಯಿಂದಾ	ಸ್ತುತಿನಿಂದಾ
೪೪	೨	೫–೧–೧೯೧೮	೫–೩–೧೯೧೮

ಬೇಂದ್ರೆ ಸಾಹಿತ್ಯ ಸಿದ್ಧಾಂತಮಾಲೆಯ ಬಗ್ಗೆ

ಬೇಂದ್ರೆಯವರ ಕಾವ್ಯ, ನಾಟಕ, ಸಣ್ಣಕತೆ, ಹರಟೆ ಮತ್ತು ವಿಮರ್ಶೆ ಸಾಹಿತ್ಯ-ಸೃಷ್ಟಿಯಲ್ಲಿ ಅನೇಕ ಚಿಂತನಗಳು ಅಭಿವ್ಯಕ್ತಗೊಂಡಿವೆ. ಶಬ್ದದಿಂದ-ಸಂಖ್ಯೆಗೆ; ಪ್ರೀತಿಯಿಂದ-ಸಮರ್ಪಣೆಗೆ; ಸ್ನೇಹದಿಂದ-ಸಮರಸತೆಗೆ; ಅನೈಕ್ಯದಿಂದ ಐಕ್ಯದೆಡೆಗೆ ಮತ್ತು ಕತ್ತಲೆಯಿಂದ ಬೆಳಕಿನೆಡೆಗೆ ಚಲಿಸುವ ವಿಮೋಚನೆಯ ವಿಚಾರ ಶಲಾಕೆಗಳು ಬೇಂದ್ರೆ ಸಾಹಿತ್ಯದಲ್ಲಿವೆ. ಈ ಎಲ್ಲ ವಿಚಾರಗಳಲ್ಲಿ ಮಾನವವಿಕಾಸದ ಸಿದ್ಧಾಂತ ಅಡಕವಾಗಿದೆ. ಈ ಬೆಳವಣಿಗೆಯನ್ನು ಕ್ರಮವಾಗಿ ಹುಡುಕಿತೆಗೆದು ಅದರ ಮಹತ್ವ-ವನ್ನು ವಿವರಿಸುವುದು ಇಂದಿನ ಅಗತ್ಯವಾಗಿದೆ.

೩೧-೧-೯೮೪ರಂದು ಬೇಂದ್ರೆ ಸಾಹಿತ್ಯ ಸಿದ್ಧಾಂತ ಕುರಿತು ಹುಬ್ಬಳ್ಳಿಯ ಜೆ. ಎಸ್. ಎಸ್. ಕಾನೂನು ಮಹಾವಿದ್ಯಾಲಯದಲ್ಲಿ ಒಂದು ವಿಚಾರ ಸಂಕಿರಣ ಏರ್ಪಡಿಸಿದ್ದೆವು. ಅದರಲ್ಲಿ ಡಾ. ಕೆ. ಜಿ. ಶಾಸ್ತ್ರಿ, ಡಾ. ದೇವೇಂದ್ರಕುಮಾರ ಹಕಾರಿ, ಶ್ರೀ ಸುಬ್ಬರಾವ ದೇಶಪಾಂಡೆ, ಶ್ರೀ ಪಿ. ಆರ್. ಭಾಗವತ, ಪ್ರಾ. ಕೆ. ಎಸ್. ಶರ್ಮಾ, ಶ್ರೀ ಸುರೇಶ ಕುಲಕರ್ಣಿ ಮತ್ತು ಡಾ. ವಾಮನ ಬೇಂದ್ರೆ ಭಾಗವಹಿಸಿ ಪ್ರಬಂಧಗಳನ್ನು ಮಂಡಿಸಿದ್ದರು. ಪ್ರಬಂಧಪ್ರಕಾಶನದ ಮುಂದಿನ ಹೆಜ್ಜೆ ಈಗ ಇಡಲಿದ್ದೇವೆ.

ಜಾತಿ, ಮತ, ಭಾಷೆ, ಸಾಹಿತ್ಯ, ರಾಜಕೀಯ ಮೊದಲಾದ ವಿವಿಧ ಶಕ್ತಿಗಳ ಒತ್ತಡಗಳ ಮೂಲಕ ನಾಡು ಹರಿದು ಹಂಚಿ ಹೋಗುವುದುಂಟು ಮತ್ತು ಕೆಲವು ಮಾನವೀಯ ಮೌಲ್ಯಗಳ ಪ್ರತಿಪಾದಕಹೋರಾಟಗಳ ಮೂಲಕ ನಾಡನ್ನು ಮತ್ತು ನಾಡಿಗರನ್ನು ಒಂದು ಮಾಡುವ ಸಾಧ್ಯತೆ ಉಂಟು. ಇಂದು ಭೌಗೋಲಿಕ, ದೈಹಿಕ ಮತ್ತು ರಾಜಕೀಯ ಐಕ್ಯದ ಚದುರಂಗದಾಟ ನಡೆದಿದೆ. ಇದರಿಂದ ಮಾನವೀಯತೆಯು ಕುಸಿದು ಶಿಥಿಲಗೊಳ್ಳುತ್ತಲಿದೆ. ಹೀಗಾಗಬಾರದು ಎಂಬುದೇ ಬೇಂದ್ರೆ ಸಿದ್ಧಾಂತದ ಕೇಂದ್ರಬಿಂದು. ನವಮಾನವತೆಯ ಉದಯವೆಂದರೆ- ವಿವಿಧಜ್ಞಾನ ಶಾಖೆಗಳಲ್ಲಿಯ ಮಾನವೀಯ ಐಕ್ಯವನ್ನು ಕಂಡು, ಆ ಪ್ರಜ್ಞೆಯಿಂದ ಪುಷ್ಟಗೊಂಡ ನವಸಮಾಜದ ಸೃಷ್ಟಿ. ಆದುದರಿಂದ ಇದಕ್ಕಾಗಿಯೇ ಬೇಂದ್ರೆಯವರು ತಮ್ಮ ಲೇಖನಿಯಿಂದ ಹೋರಾಡಿದರು. ಆ ಹೋರಾಟದ ಹಾಗೂ ಸಿದ್ಧಾಂತದ ಸ್ಪಷ್ಟವಾದ ಚಿತ್ರವನ್ನು ಈ ಬೇಂದ್ರೆ ಸಾಹಿತ್ಯ ಸಿದ್ಧಾಂತಮಾಲೆಯ ಪುಸ್ತಿಕೆಗಳ ಪ್ರಕಟಣೆಯ ಮೂಲಕ ರೂಪಿಸುವ ಉದ್ದೇಶ ನಮ್ಮದಾಗಿದೆ.

—ಸಂಪಾದಕರು